# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVI - 7-8 ಜುಲಾಯಿ-ಆಗಸ್ಟ್ 1998

### ಈ ಸಂಚಿಕೆಯಲ್ಲಿ


| | | |
|---|---|---|
| (ಹರಿ)ದಾಸ ಸಾಹಿತ್ಯ 4 | • ರಮಾಕೃಷ್ಣ | 2 |
| ಶ್ರೀಮತಿ ಗಾಯತ್ರಿ ಸುಬ್ಬರಾವ್ | • ರಮಾಕೃಷ್ಣ | 6 |
| ಚೌಕಟ್ಟು (ಕಿರುಗತೆ) | • ಡಾ। ಮಂಜುನಾಥ್ | 7 |
| ಸ್ವಾತಂತ್ರ್ಯದ ಸ್ವರ್ಣೋತ್ಸವ ಒಂದು ನೋಟ | • ವಾಸುದೇವ ಕಾಣೆಮಾರ್ | 8 |
| ಮಹಿಳಾ ಮಂಡಳದ ಪಿಕ್‌ನಿಕ್ | • ಸುಮಾ ದ್ವಾರಕನಾಥ್ | 10 |
| ಸಂಮೋಹಿನಿ ಚಿಕಿತ್ಸೆ - 22 | • ಡಾ। ಉಷಾರಾವ್ | 12 |
| ಸುತ್ತ-ಮುತ್ತ | | 14 |
| ವಿ. ಎಚ್. ಸೋಮೇಶ್ವರ್ - ಅಗಲಿಕೆ | | 15 |


The Mysore Association, Mumbai
393. Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಹರಿದಾಸ ಸಾಹಿತ್ಯ

(ಭಾಗ - ೪)

• ರಮಾಕೃಷ್ಣ

## ವಾಯು ದೇವರು

ವಾಯುದೇವ, ಮಾರುತಿ, ಮುಖ್ಯಪ್ರಾಣ, ಹನುಮಂತ, ಸಂಜೀವ ಇವೆಲ್ಲಾ ಈತನ ಹೆಸರೇ ಮಧ್ವಮತದಲ್ಲಿ ಈ ದೇವತೆಗೆ ವಿಶೇಷ ಸ್ಥಾನವಿದೆ. ದೇವತಾರತಮ್ಯದಲ್ಲಿ ಲಕ್ಷ್ಮೀನಾರಾಯಣರನ್ನು ಬಿಟ್ಟರೆ ಇವನೆ ಎಲ್ಲಾ ತತ್ವೇಶ್ವರರಲ್ಲಿ ಶ್ರೇಷ್ಠನಾದವನು. ನಾರಾಯಣ ಸರ್ವೋತ್ತಮನಾದರೆ, ಈತ ಜೀವೋತ್ತಮ ಲಕ್ಷ್ಮೀನಾರಾಯಣರು ಮಾತ್ರ ಈಶಕೋಟಿಗೆ ಸೇರಿದವರು. ಮತ್ತೆಲ್ಲರೂ ಜೀವರು ಹಾಗೂ ಲಕ್ಷ್ಮೀನಾರಾಯಣರಿಗೆ ಅಧೀನರು (1) ಹರಿ (2) ಲಕ್ಷ್ಮೀ (3) ನೆಯ ಕಕ್ಷೆಯಲ್ಲಿ ವಾಯುದೇವರು 'ಇದ್ದು ಸದಾ ಲಕ್ಷ್ಮಿಯನ್ನು ನೋಡುತ್ತಿರುವವನು. ಅವನು ಜೀವನಾದರೂ ನಿರ್ದೋಷ, ಪಾಪಮುಕ್ತ ಉಳಿದೆಲ್ಲ ಜೀವರಿಗೂ ಅತಃಪ್ರೇರಕ, ಜ್ಞಾನ ಭಕ್ತಿ, ವೈರಾಗ್ಯಗಳಲ್ಲಿ ಇವನಿಗೆ ಸಮನಾದವರು ಯಾರೂ ಇಲ್ಲ. ಹಾಗೆಂದೇ ಇವನು ಜೀವೋತ್ತಮ ಮತ್ತೆ ಪರಮಾತ್ಮನಲ್ಲಿ ಕುರಿತ ಜ್ಞಾನ ಇವನಲ್ಲಿರುವಂತೆ ಯಾರಲ್ಲೂ ಇರದು. ಬ್ರಹ್ಮಾಂಡದದಲ್ಲಿರುವ, ನಡೆಯುವ ವ್ಯಾಪಾರಗಳನ್ನೆಲ್ಲಾ ಅಶೇಷವಾಗಿ ಅರಿಯುವುದರಿಂದ ಜ್ಞಾನಿ, ಮುಕ್ತರ ಕೋಟಿಯಲ್ಲಿ ಸೇರಿದವನು. ಇವನಿಗೆ ದುಃಖವಿಲ್ಲ ಸದಾ ಹರಿ ಸೇವೆಯಲ್ಲಿ ತೊಡಗಿದ್ದು ಹರಿಯ ಮಹಾತ್ಮೆಯನ್ನು ಇತರರಿಗೆ ತಿಳಿಯಪಡಿಸುವವನಾದ್ದರಿಂದ ಜಗದ್ಗುರು, ಅವನ ಉಪದೇಶವೇ ಸಚ್ಛಾಸ್ತ್ರ, ಸೃಷ್ಟಿಸ್ಥಿತಿ, ಸಂಹಾರ ನಿಯಮನ, ಜ್ಞಾನ, ಅಜ್ಞಾನ, ಮುಕ್ತಿಗಳೆಂಬ 8 ಮುಖ್ಯಕಾರ್ಯಗಳಲ್ಲಿ ಅವನೇ ಮುಖ್ಯನಾದ ಅಂಗ. ಮುಕ್ತಿ ಯೋಗ್ಯರಾದ ಸಾತ್ವಿಕ ಜೀವರಿಗೆ ಅವರವರ ಯೋಗ್ಯತಾನುಸಾರ ಮುಕ್ತಿಯನ್ನು ಕೊಡುವವನೂ ಅವನೇ. ಆದರೆ ಇದನ್ನು ಹರಿಯಾಜ್ಞೆಯಿಂದ ಮಾಡುತ್ತಾನೆ. ಆದ್ದರಿಂದ ಪುರಂದರದಾಸರು ಇವನನ್ನು ಈ ರೀತಿ ಹೊಗಳಿಸಿದ್ದಾರೆ. 'ಜೀವಕೋಟಿಯೊಳು, ಹಿರಿಯ ನೀನೊಲಿಯದಿರೆ ಹರಿ ಎಮ್ಮ ಪೊರೆಯ; ಜೀವೋತ್ತಮನಾದನೀತ ಹರಿ ಮತ್ತು ಜೀವಿಗಳ ಮಧ್ಯೆ ಸೇತುವೆ ಇದ್ದಂತೆ.

ಸಾಧಕರಿಗೆ ಅವನು ಮಾರ್ಗದರ್ಶಿ ಈತ ಅನನ್ಯ ಭಕ್ತಿಗೆ ಅತ್ಯುತ್ತಮ ನಿದರ್ಶನ, 'ಮನ ವಚನ ಕಾಯದಿಂದ ಅನ್ಯವನರಿಯದ ಹನುಮಂತಾ; ನಿನ್ನ ದಾಸನೆಂದೆನಿಸಯ್ಯಾ' ಎಂದಿರುವರು ಅಚಲಾನಂದ ದಾಸರು 'ಹನುಮಂತನ ನೋಡು ತನ್ನ ತನು ಮನ ಧನವನು ಹರಿಗೊಪ್ಪಿಸಿಹ' ಎಂದಿದ್ದಾರೆ ವಾದಿರಾಜರು 'ಇದಿರ್ಯಾರೋ ಗುರುವೇ ಸಮನ್ಯಾರೋ ಮದನ ಜನಕ ಪದುಮ ಪಟ್ಟದನೆ' ಎಂದು ಕೊಂಡಾಡಿದ್ದಾರೆ ನರಹರಿತೀರ್ಥರು. ವಾಯುವಿನ ಗುಣದಲ್ಲಿ ಪರಮೋತ್ಸಾಹ ವರ್ಜನೆಯ ಗುಣವಿದೆ. ಎಂದರೆ ತನ್ನ ಯೋಗ್ಯತೆಯ ಬಲ ಇನ್ನೂ ಅಧಿಕವಿದ್ದಾಗ್ಯೂ ಈತ ಅದನ್ನು ಅಪೇಕ್ಷಿಸದೆ (ತೋರಿಸದೆ) ಹರಿಯ ಪ್ರೀತಿಯೆ ತನ್ನ ಪರಮೋದ್ದೇಶ ಎಂದವ, ಕೃತಯುಗದಲ್ಲಿ ಹನುಮಂತನಾಗಿ ರಾಮನನ್ನು ಸೇವಿಸಿದ. ದ್ವಾಪರಯುಗದಲ್ಲಿ ಭೀಮನಾಗಿ ಕೃಷ್ಣನನ್ನು ಸೇವಿಸಿದ. ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಹರಿಮಹಾತ್ಮೆಯನ್ನು ಪ್ರಚಾರ ಮಾಡಿದನೆಂದು ಮಧ್ವಮತ ಅವತಾರ ತ್ರಯವನ್ನು ಹೇಳುತ್ತದೆ. ಕಲ್ಪಾಂತ್ಯದಲ್ಲಿ ಈಗಿರುವ ಬ್ರಹ್ಮ ನಿವೃತ್ತನಾದಾಗ (ಆ ಜಾಗಕ್ಕೆ) ಬ್ರಹ್ಮಪದವಿಗೆ ಬರುವಾತ

(ಹರಿ ಭಕ್ತಿ ಸಾರದಿಂದ 44ನೇ ಪದ್ಯ)

ವೀರ ರಾವಣನೊಡನೆ ಹೋರಿದ
ವೀರರಗ್ಗದ ಕಪಿಗಳವರೊಳು
ಮಾರುತನ ಮಗನೇನು ಧನ್ಯನೋ
ಬ್ರಹ್ಮಪಟ್ಟದಲಿ ಸೇರಿಸಿದೆ ನಿನ್ನಂತೆ ಕೊಡುವ ಉ
ದಾರಿ ಯಾವನು ತ್ರಿಜಗದೊಳಗಾ
ಕಾರಣ ದಿ ನಂಬಿದೆನು ರಕ್ಷಿಸು ನಮ್ಮ ನನವರತ

ಎಂದಿದ್ದಾರೆ ಕನಕದಾಸರು.

ಈತ ಜೀವೋತ್ತಮನಾದುದರಿಂದ ಜೀವಿಗಳಿಗೆಲ್ಲಾ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಅವರವರ ಯೋಗ್ಯತಾನುಸಾರ ನೀಡಿ ಜೀವಿಗಳನ್ನು ಉದ್ಧಾರ ಮಾಡುವವನು. ಜೀವಿಗಳಲ್ಲಿ ಶ್ವಾಸ (ಉಸಿರು) ರೂಪದಿಂದ ಇರುವವನು. ವ್ಯಾಸರಾಯ ಸ್ವಾಮಿಗಳು 732 ಮಾರುತಿಯ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದ್ದಾರೆಂದೂ ಅದರಲ್ಲಿ ಅರ್ಧದಷ್ಟು ಕರ್ನಾಟಕದಲ್ಲೇ ಇದೆಯೆಂದೂ, ಕರ್ನಾಟಕ ಭಕ್ತಿ ವಿಜಯದಿಂದ ತಿಳಿದು ಬರುತ್ತದೆ. ಹರಿದಾಸ ಸಾಹಿತ್ಯದಲ್ಲಿ ಮಾರುತಿಯನ್ನು ಕುರಿತ ರಚನೆಗಳು ಹೇರಳವಾಗಿ ದೊರೆಯುತ್ತದೆ.

ಗುರು : ಹರಿದಾಸರಲ್ಲಿ ಗುರುವಿಗೆ ವಿಶೇಷ ಸ್ಥಾನವುಂಟು. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬುದು ಅವರ ತಿಳುವಳಿಕೆ. ಮಧ್ವಾಚಾರ್ಯರೂ ಕೂಡ ತಮ್ಮ ತಂತ್ರ ಸಾರದಲ್ಲಿ ಮೊದಲು ಗುರುಗಳನ್ನೂ, ನಂತರ ತಾರತಮ್ಯಕ್ರಮದಲ್ಲಿ ದೇವತೆಗಳನ್ನೂ, ಅನಂತರ ಸರ್ವೋತ್ತಮನಾದ ಹರಿಯನ್ನೂ ನೆನೆಸಿಕೊಳ್ಳಬೇಕೆಂದು ಸೂಚಿಸಿದ್ದಾರೆ.

ಭಗವತ್ಸ್ವರೂಪವಾಗಲೀ, ಸಾಧನೆಯಾಗಲೀ, ಯಾವ ಭೌತಿಕ ಪ್ರಮಾಣದಿಂದಲೂ ಸಿದ್ಧವಾಗುವುದಿಲ್ಲ; ಅದನ್ನೂ ಬಲ್ಲವರಿಂದ ತಿಳಿದುಕೊಳ್ಳುವುದೊಂದೇ ದಾರಿ. ಹಾಗೆ ಅದನ್ನು ತಿಳಿಸಿ ಕೊಡುವವನು ಗುರು. ಲೌಕಿಕ ವಿದ್ಯೆಯನ್ನು ಕಲಿಸುವವನೂ ಗುರುವೇ ಆದರೂ, ಮುಕ್ತಿಗೆ ನೆರವಾಗುವ ಬ್ರಹ್ಮವಿದ್ಯೆಯನ್ನು ಬೋಧಿಸುವವನೇ ನಿಜವಾದ ಗುರು. ತಮ್ಮ ಹಿಂದಿನ ಗುರು ಪರಂಪರೆಯನ್ನು ನೆನೆಯುವುದು ಒಂದಿಸುವುದು ದ್ವಾಪರ ದಾಸಕೂಟದವರ ವೈಶಿಷ್ಟ್ಯ.

## ಪುರಂದರ ದಾಸರು

ಪುರಂದರ ದಾಸರಕಾಲ : ಶ್ರೀ ಪುರಂದರ ದಾಸರ ಕಾಲ ಸ್ವಾಮಿ ಕಣ್ಣ ಪಿಳ್ಳೆಯವರ ಪ್ರಕಾರವು 1485ರಿಂದ 1565ರ ನಡುವೆ ಎಂದು ತಿಳಿಯುತ್ತದೆ.

ಮೊಟ್ಟಮೊದಲು ಪುರಂದರದಾಸರು ನಮ್ಮ ಗಮನಕ್ಕೆ ಬರುವುದು ಬಳ್ಳಾರಿ ಜಿಲ್ಲೆಯ ಕಮಲಾಪುರ (ಕಂಪರಿ)ದ ತಾಂಮ್ರ ಶಾಸನದಿಂದ ಈ ಶಾಸನ ಹೊರಟಿರುವುದು ಶಾಲೀವಾಹನಶಕ 1447. ಪಾರ್ಥಿವ ಸಂವತ್ಸರದ ಫಾಲ್ಗುಣ ಮಾಸ ಶುದ್ಧ ದ್ವಾದಶಿ ಎಂದರೆ 1526 ಫೆಬ್ರವರಿ 24ರಂದು. ಈ ಶಾಸನ ಪುರಂದರ ದಾಸರು. ಜೀವಿಸಿದ್ದಾಗಿನದೇ ಆಗಿದೆ. ಇದರ ಪ್ರಕಾರ ಆಗ ವಿಜಯ ನಗರದ ಅರಸನಾಗಿದ್ದ ಕೃಷ್ಣದೇವರಾಯನು 'ವ್ಯಾಸ ಸಮುದ್ರ' ಎಂಬ ನಾಮಾಂಕಿತದ ಬೆಟ್ಟಗೊಂಡ ಗ್ರಾಮವನ್ನು ತನ್ನ ಗುರುವಾದ ವ್ಯಾಸರಾಯ ಸ್ವಾಮಿಗಳಿಗೆ ಸರ್ವಮಾನ್ಯ ಏಕಭೋಗ್ಯೆ ದತ್ತಿಯನ್ನಾಗಿ ಕೊಟ್ಟವನು ವ್ಯಾಸರಾಯರು ಪುರಂದರದಾಸರ ದೀಕ್ಷಾಗುರುಗಳು ಈ ದತ್ತಿಯನ್ನು ವ್ಯಾಸರಾಯರು 308 ಜನ ವಿದ್ವಾಂಸರಿಗೆ ವೃತ್ತಿದಾನವಾಗಿ ಹಂಚಿ ಕೊಟ್ಟರು. ಈ ವಿದ್ವಾಂಸರ ಪೈಕಿ ಪುರಂದರ ದಾಸಜ (ಮಕ್ಕಳಾದ)ರಾದ ಮೂವ್ವರ ಹೆಸರುಗಳಿವೆ. (1) ಲಕ್ಷ್ಮಣದಾಸ್ (2) ಹೇಬಣದಾಸ್ (3) ಮಧ್ವಪತಿದಾಸ ಈ ಮೂವ್ವರೂ ವಶಿಷ್ಠ ಗೋತ್ರದವರೆಂದೂ ಯಜುಷ್ ಶಾಖೇ (ಯಜುರ್ವೇದಿಗಳು) ಯವರೆಂದೂ ಹೆಸರಿಸಿದ್ದಾರೆ. ಪುರಂದರ ದಾಸರು ಪ್ರಖ್ಯಾತರಾಗಿದ್ದರೂ ಅವರಿಗೆ ವೃತ್ತಿಯನ್ನೇನೂ ಒದಗಿಸಿಲ್ಲ. ಅವರೂ ತೀರಾ ವಿರಕ್ತರಾಗಿದ್ದುದೇ ಕಾರಣವಿರಬೇಕೆಂದು ವಿದ್ವಾಂಸರುಗಳ ಅಭಿಪ್ರಾಯ. ಇದರ ನಂತರ ನಮಗೆ ಐತಿಹಾಸಿಕ ಎಳೆದೊರೆಯುವುದು ಅಣ್ಣಾಮಾಚಾರ್ಯರ ಪೀಳಿಗೆಯವರಿಂದ ಅಣ್ಣಮಾಚಾರ್ಯರ ಕಾಲ 1408ರಿಂದ 1507 ಇವರು ತಿರುಮಲ ತಿರುಪತಿಯ ದೇವಸ್ಥಾನದಲ್ಲಿ ಸಂಕೀರ್ತನ ಸೇವೆ ಮಾಡುತ್ತಿದ್ದವರು. ಆ ಸ್ವಾಮಿಯ ಸೇವೆಯಲ್ಲೇ ತಮ್ಮ ಜೀವಿತವನ್ನು ಕಳೆದವರು. ಇವರಿಗೆ ತಮ್ಮ ಹದಿನಾರನೇ ವಯಸ್ಸಿನಲ್ಲಿ ವೆಂಕಟೇಶ್ವರನ ಸಾಕ್ಷಾತ್ಕಾರವಾಗಿತ್ತೆಂದೂ ಇವರು ತಮ್ಮ 96ನೇ ವಯಸ್ಸಿನವರೆಗೆ ದೀರ್ಘಾಯುಷಿಗಳಾಗಿ ಬದುಕಿದರೆಂದೂ, ಪುರಂದರದಾಸರು ಇವರನ್ನು ಭೇಟಿ ಮಾಡಿದ್ದರೆಂದೂ, ಪುರಂದರದಾಸರನ್ನು ನೋಡಿ ಅವರ ಗಾಯನವವನ್ನು ಕೇಳಿ ಅಣ್ಣಾಮಾಚಾರ್ಯರು

## ಶ್ರೀ ಸ್ವರ್ಣಗೌರಿ ಮತ್ತು ಮಹಾಗಣಪತಿ ಮಹೋತ್ಸವ 1998

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ಬಹುಧಾನ್ಯ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ, ಮಂಗಳವಾರ 25-8-1998ರಂದು ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಅಷ್ಟಮಿ ಭಾನುವಾರ 30-8-1998ರ ವರೆಗೆ ಉತ್ಸವವನ್ನು ಅಸೋಸಿಯೇಷನ್‌ನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ

| | | |
|---|---|---|
| **25-8-1998** ಮಂಗಳವಾರ | **9-00 a.m.** | ಶ್ರೀ ಸ್ವರ್ಣಗೌರಿ ಹಾಗೂ ಶ್ರೀ ಮಹಾಗಣಪತಿ ಪ್ರತಿಷ್ಠಾಪನೆ ಮತ್ತು ಪೂಜೆ. |
| **26-8-1998** ಬುಧವಾರ | **7-30 p.m.** | ಶ್ರೀಮತಿ ವಿಜಯಲಕ್ಷ್ಮಿನಾಥನ್ ಅವರ ಶಾಥನ್ ಅವರ ಶಾಸ್ತ್ರೀಯ ಗಾಯನ - ಕರ್ನಾಟಕ ಶೈಲಿ. |
| **27-8-1998** ಗುರುವಾರ | **7-30 p.m.** | ಸಿಂಧು ಭೈರವಿ ತಂಡ - ಭಜನೆ ಮತ್ತು ಭಕ್ತಿ ಗೀತೆಗಳು. |
| **28-8-1998** ಶುಕ್ರವಾರ | **7-30 p.m.** | ಶ್ರೀಮತಿ ಉಷಾ ರಾಜನ್ ಅವರ ಶಾಸ್ತ್ರೀಯ ಗಾಯನ - ಕರ್ನಾಟಕ ಶೈಲಿ. |
| **29-8-1998** ಶನಿವಾರ | **7-30 p.m.** | ಶ್ರೀಮತಿ ಶಂಪಾ ಪಕ್ರಾಸಿ ಅವರ ಶಾಸ್ತ್ರೀಯ ಗಾಯನ - ಹಿಂದೂಸ್ತಾನಿ ಶೈಲಿ. |
| **30-8-1998** ಭಾನುವಾರ | **11-30 p.m.** | ಸುಶೀಲಾ ಆಚಾರ್ಯ ಮತ್ತು ತಂಡದವರಿಂದ ಭಕ್ತಿ ಗೀತೆಗಳು ನಂತರ ವಿಸರ್ಜನೆ ಹಾಗೂ ಪ್ರಸಾದ ವಿನಿಯೋಗ. |

*ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಗವತ್‌ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.*

ದಿವ್ಯಗಾಯನವೆಂದೂ, ಸಾಕ್ಷಾತ್ ವಿಠ್ಠಲ ಎದುರಿಗೆ ನಿಂತಿಂತಿದೆ ಎಂದು ಹೇಳಿದರೆಂದೂ ಪುರಂದರ ದಾಸರು ವಯೋವೃದ್ಧರೂ, ಭಕ್ತಶಿರೋಮಣಿಗಳೂ ಆದ ಅಣ್ಣವಮಾಚಾರ್ಯರನ್ನು ಕಂಡು, ಸಾಕ್ಷಾತ್ ವೆಂಕಟೇಶ್ವರನ ದರ್ಶನವಾಯ್ತೆಂದು ಉದ್ಗಾರವೆತ್ತಿದರೆಂದೂ ಅಣ್ಣವಮಾಚಾರ್ಯರ ಮೊಮ್ಮಗನಾದ. ಚಿನ್ನನ್ನ (ಚಿನ್ನ ತಿಳು ವೆಂಗಳನಾಥ) ಎಂಬುವರು ತಮ್ಮ ಒಂದು ರಚನೆಯಲ್ಲಿ ಇವರಿಬ್ಬರ ಭೇಟಿಯ ಪ್ರಸಂಗವನ್ನು ವರ್ಣಿಸಿದ್ದಾರೆ. ಅಣ್ಣವಮಾಚಾರ್ಯರ ವಂಶದವರು ನಾಲ್ಕು ತಲೆಮಾರುಗಳ ವರೆಗೆ ವೆಂಕಟೇಶ್ವರ ಸೇವೆಯಲ್ಲಿದ್ದರು. ಈ ವಂಶದವರ ರಚನೆಯ ಸಾಹಿತ್ಯ ಭಂಡಾರವೇ ತಿರುಪತಿಯಲ್ಲಿದೆ.

ಮತ್ತೆ ನಮಗೆ ಪುರಂದರದಾಸರ ಬಗ್ಗೆ ತಿಳಿಯುವುದು ಪ್ರಸನ್ನ ವೆಂಕಟದಾಸ್‌ರ ಕೃತಿಯಿಂದ ಇವರು ಕವಿಗಳೂ, ದಾಸರೂ ಆಗಿದ್ದವರು. (ನಿಧನ : 1674) ಇವರ ತಂದೆ ಪುರಂದರದಾಸರ ಸ್ಮರಿಸುವೆ ಎಂಬ ಪದದಲ್ಲಿ ಪುರಂದರ ದಾಸರ ವ್ಯಕ್ತಿತ್ವ ಹಾಗೂ ವಾಙ್ಮಯ ಎರಡರ ಉಲ್ಲೇಖವೂ ಇದೆ. ಇನ್ನೊಂದು ಎಳೆ ಇವರಿಗಿಂತ ಪ್ರಬಲರಾದ ಹಾಗೂ ಪ್ರಖ್ಯಾತರಾದ 'ವಿಜಯದಾಸರ ಉಲ್ಲೇಖದಿಂದ (1687 - 1755)

ರಾಯಚೂರು ಜಿಲ್ಲೆಯ ಮಾನ್ವಿ ಹತ್ತಿರದ ಚೀಕಲಪದವಿ ಎಂಬುದು ಇವರ ಊರು. ಇವರು ಉತ್ತರ ಭಾರತದ ಯಾತ್ರೆ ಹೊರಟು ಕಾಶಿಗೆ ಬಂದು ಗಂಗೆಯನ್ನೂ ದಾಟಿ ವ್ಯಾಸಕಾಶಿಯಲ್ಲಿದ್ದಾಗ. ಒಂದು ರಾತ್ರಿ ಕನಸಿನಲ್ಲಿ ಇವರಿಗೆ ಶ್ರೀ ಪುರಂದರದಾಸರು ದರ್ಶನಕೊಟ್ಟು, ದಾಸದೀಕ್ಷೆಯನ್ನೂ ವಿಜಯ ವಿಠ್ಠಲನೆಂದು ಅಂಕಿತವನ್ನೂ ಕೊಟ್ಟು ಮರೆಯಾದರಂತೆ, ಅಲ್ಲಿಯವರೆಗೆ ಬರೀ ದಾಸಪ್ಪನೆಂಬ ಹೆಸರಿದ್ದ ಇವರು ವಿಜಯ ದಾಸರಾದರು. ಪುರಂದರ ದಾಸರು ತೀರಿಕೊಂಡ ಸುಮಾರು ವರ್ಷಗಳ ನಂತರ. ಹಂಚಿ, ಹರಡಿ ಹೋಗಿದ್ದ ಪುರಂದರ ಸಾಹಿತ್ಯವನ್ನು ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ಊರೂರು ತಿರುಗಿ ಕ್ರೋಢೀಕರಿಸಿದರು. ಇದರಿಂದ ಮತ್ತೆ ಪುರಂದರ ಸಾಹಿತ್ಯದ ಪರಿಚಯ ಜನಗಳಿಗಾಗುವಂತಾಯ್ತು.

ವಿಜಯ ದಾಸರಿಗೆ ದಾಸಪ್ರವೃತ್ತಿಯಾಗಲೀ ಪುರಂದರ ಸಾಹಿತ್ಯವಾಗಲಿ ಅಪರಿಚಿತವೆನ್ನಲು ಸಾಧ್ಯವಿಲ್ಲ. ಅವರ ಬಾಲ್ಯದಿಂದಲೇ ಇವೆರಡರ ಪರಿಚಯವೂ ಇದ್ದಿರಬೇಕು. ಈ ಹಿಂದೆಯೇ ತಿಳಿಸಿರುಂತೆ ವಿಜಯನಗರ ಸಾಮ್ರಾಜ್ಯ ಹಾಳಾದ ನಂತರ ಸುಮಾರು 6 ತಿಂಗಳಕಾಲ ಹಂಪೆಯಲ್ಲಿ ಅವ್ಯಾಹತವಾಗಿ ಲೂಟಿ, ಸುಲಿಗೆ ನಡೆದುವಷ್ಟೆ. ಹಂಪೆಯಲ್ಲಿ ಹುಟ್ಟಿ ಚೆನ್ನಾಗಿ ಬೆಳೆದಿದ್ದ ದಾಸ ಕೂಟದ ದಾಸರುಗಳು ಇಂತಹ ಸನ್ನಿವೇಶದಲ್ಲಿ ತಮ್ಮ ದಾಸ ಕೂಟದ ಅಮೂಲ್ಯ ಸಾಹಿತ್ಯವನ್ನು ಹೊತ್ತು ಸುರಕ್ಷಿತ ಸ್ಥಳಗಳಿಗೆ ಹೋಗಿ ಅಲ್ಲಿ ತಮ್ಮ ಸಾಹಿತ್ಯವನ್ನು ಪೋಷಿಸಿಕೊಂಡಿದ್ದರು. ಅಂತಂತಹ ಸ್ಥಳಗಳಿಗೆ ವಿಜಯದಾಸರು ಹೋಗಿ ಮೌಖಿಕವಾಗಿಯೇ, ಇಲ್ಲಾ ಲಿಖಿತವಾಗಿಯೇ ಇದ್ದ. ಪುರಂದರ ಸಾಹಿತ್ಯವನ್ನು ಸಂಗ್ರಹಿಸಿದರು. ಪುರಂದರ ಸಾಹಿತ್ಯದ ಪುನರ್ ಸಂಗ್ರಹಣ ಮಾಡಿದ ಶ್ರೇಯಸ್ಸು ವಿಜಯದಾಸರದ್ದು.

ವಿಜಯದಾಸರ ಕಾಲದಲ್ಲಿ ಪುರಂದರ ಸಾಹಿತ್ಯ ರೂಢಿಯಿಂದ ತಪ್ಪಿದ್ದಿತೇ ವಿನಃ ನಾಶವಾಗಿರಲಿಲ್ಲ. ಈ ವಿಷಯ ನಮಗೆ ಮತ್ತೊಂದು ಆಕರದಿಂದ ದೊರೆಯುತ್ತದೆ. ಮಹಾರಾಷ್ಟ್ರದ ಭೋಸಲೆ ಮನೆತನದವರು ತಂಜಾವೂರನ್ನು 1684ರಿಂದ ಆಳಲು ಪ್ರಾರಂಭ ಮಾಡಿದರಷ್ಟೆ. ಈ ಅರಸರೆಲ್ಲರೂ, ಸಂಗೀತ, ಸಾಹಿತ್ಯ, ಲಲಿತಕಲೆಗೆ ಹೆಚ್ಚಿನ ಪ್ರೋತ್ಸಾಹನೀಡಿ ಬೆಳೆಸಿ ಬಾಳಿಸಿದವರು. ಇವರಲ್ಲಿ ಪ್ರಸಿದ್ಧನಾದವನು ತುಳಜೇಂದ್ರ (ತುಳಜಾಜಿ ಅಥವಾ ತುಕ್ಕೋಜಿ) 1728-1736) ಈತ ಸಾಹಿತಿ, ಸಂಗೀತ ರಸಿಕ; ಶಾಸ್ತ್ರಜ್ಞ ಬಹುಭಾಷಾವಿಶಾರದ ಇವನು 'ಸಂಗೀತ ಸಾರಾಮೃತ' ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES,**
**EAST WEST,**
**MODI LUFT &**
**JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ರಚಿಸಿದ್ದಾನೆ. ಇದರಲ್ಲಿ ಈತ ಪುರಂದರದಾಸರ ಗುರುಗಳಾದ ವ್ಯಾಸರಾಯರನ್ನು ತನ್ನ ಗುರುಗಳೆಂದು ಭಾವಿಸಿರುವುದೇ ಅಲ್ಲದೆ, ಪುರಂದರದಾಸರ ಕೆಲ ಸೂಳಾದಿಗಳನ್ನು ಕೆಲವು ರಾಗಗಳಿಗೆ ಲಕ್ಷ್ಯವಾಗಿ ಉಲ್ಲೇಖಿಸಿದ್ದಾನೆ. ತುಳಜಾಜಿ ಪಟ್ಟಕ್ಕೆ ಬರುವ ವೇಳೆಗೆ ಪುರಂದರದಾಸರು ಗತಿಸಿ 164 ವರ್ಷಗಳೇ ಕಳೆದಿತ್ತು. ಆದರೂ ಪುರಂದರ ಸಾಹಿತ್ಯದ ಪ್ರಖ್ಯಾತಿ ಉಳಿದಿತ್ತು.

ಇನ್ನೊಂದು ಗಮನಾರ್ಹ ವಿಷಯವೆಂದರೆ ತುಳಜಾಜಿಗೆ ಮೊದಲು ತಂಜಾವೂರನ್ನು ಆಳಿದ 'ರಘುನಾಥನಾಯಕ' (1600-1634) ಸಂಗೀತ ಸಾಹಿತ್ಯ ರಸಿಕನಾದವನೇ ಈತ 'ಸಂಗೀತ ಸುಧಾ' ಎಂಬ ಗ್ರಂಥವನ್ನು ರಚಿಸಿದ್ದ ಈತ ಸ್ವತಹ ಗಾಯಕನೂ, ವೈಣಿಕನೂ ವಾಗ್ಗೇಯಕಾರನೂ, ಶಾಸ್ತ್ರಜ್ಞನೂ ಆಗಿದ್ದ ಮೇಲಾಗಿ ಈತನ ಮಾರ್ಗದರ್ಶಿಗಳೂ, ಆಪ್ತ ಸಚಿವರೂ ಆಗಿದ್ದ 'ಗೋವಿಂದ ದೀಕ್ಷಿತ'ರು ಕರ್ನಾಟಕದವರು ಸ್ವತಃ ಸಂಗೀತ ಶಾಸ್ತ್ರಜ್ಞರು 'ಸಂಗೀತ ಸುಧಾ' ಅರಸನಿಗೆ ಅಂಕಿತಮಾಡಿದ ಇವರ ಕೃತಿಯೇ ಎನ್ನುವವರೂ ಇದ್ದಾರೆ. ಆದರೂ ಸಂಗೀತ ಸುಧಾದಲ್ಲಿ, ಪುರಂದರ ದಾಸರ ಕೃತಿಗಳ ಉಲ್ಲೇಖವಿಲ್ಲ. ಇದೊಂದು ಸೋಜಿಗದ ಸಂಗತಿಯೇ ಸರಿ! ಮಹಾರಾಷ್ಟ್ರದಿಂದ ಬಂದಿದ ತುಳಜಾಜಿಗೆ ಪುರಂದರ ಸಾಹಿತ್ಯದ ಪರಿಚಯವಿತ್ತು. ಆದರೆ ಕರ್ನಾಟಕದಿಂದ ತಂಜಾವೂರಿಗೆ ಬಂದಿದ್ದ. ಗೋವಿಂದದೀಕ್ಷಿತರಿಗೆ ಪುರಂದರದಾಸರ ಅಥವಾ ಅವರ ಸಾಹಿತ್ಯದ ಪರಿಚಯ ಇರಲಿಲ್ಲ. ಎಂದರೆ ಹಂಪೆ ಹಾಳಾದನಂತರ ದಾಸಕೂಟದ ದಾಸರುಗಳು ಪುರಂದರದಾಸರ ಸಾಹಿತ್ಯವನ್ನು ಹೊತ್ತು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರವನ್ನು ಸೇರಿದ್ದಾರೆ. ಹಾಗೂ ಅಲ್ಲೆಲ್ಲಾ ಪುರಂದರ ದಾಸರ ಕೃತಿಯ ಪ್ರಚಾರ ಮಾಡಿರಬೇಕು. ಅದಲ್ಲದೆ ರಾಯಚೂರಿನ ಕಡೆಯವರಾದ ವಿಜಯದಾಸರಿಗೆ ಪುರಂದರದಾಸರು ಕನಸಿನಲ್ಲಿ ಕಾಣಿಸಿಕೊಂಡಿರುವುದೂ ಕೂಡಾ ಅರ್ಥ ಪೂರ್ಣವಾಗಿದೆ. ಪುರಂದರ ದಾಸರ ಕೃತಿಗಳು ಮೊದಲು ಕಲ್ಲಚ್ಚು ಕಂಡದ್ದೂ ಕೂಡ ಮರಾಠಿಲಿಪಿಯಲ್ಲಿಯೇ ಎಂಬುದೂ ಗಮನಾರ್ಹ (ಅಬಾಜೀ ರಾಮಚಂದ್ರ ಸಾವಂತರು ಬೆಳಗಾಂವಿಯಲ್ಲಿ 1880ರಷ್ಟು ಹಿಂದೆ. ಪುರಂದರ ಸಾಹಿತ್ಯವನ್ನು ಪ್ರಕಟಿಸಿದರು. ಕೋರಿಕಾಗದದ ತುಂಬಾ ಹಳೆಯ ಹಸ್ತಪ್ರತಿಗಳಿರುವುದು. ಮರಾಠಿಯಲ್ಲಿಯೇ (ಬಾಳ ಬಂಧು ಲಿಪಿ)

ನಾದಬ್ರಹ್ಮಶ್ರೀ ತ್ಯಾಗರಾಜರು (1767-1847) ಪುರಂದರದಾಸರ ಪದದಿಂದ ಸ್ಫೂರ್ತಿಯನ್ನೂ ಮಾರ್ಗದರ್ಶನವನ್ನೂ ಪಡೆದರೆಂದು ಹೇಳುತ್ತೇವಷ್ಟೆ. ಇವರು ಪುರಂದರದಾಸರ ಪದಗಳನ್ನು ಕಲಿತದ್ದು. ತಂದೆ ರಾಮಬ್ರಹ್ಮರಿಂದ. ರಾಮ ಬ್ರಹ್ಮರು ಇಮ್ಮಡಿ ತುಳಜಾಜಿಯ ಆಸ್ಥಾನದಲ್ಲಿ (1763-1787) ತಂಜಾವೂರಿನಲ್ಲಿ ರಾಮಾಯಣ ಕಾಲಕ್ಷೇಪ ಮಾಡುತ್ತಿದ್ದರು ಇವರಿಗೂ ಪುರಂದರ ಸಾಹಿತ್ಯ ಮಹಾರಾಷ್ಟ್ರದಿಂದಲೇ ದೊರೆತಿರಬೇಕು. ಮಹಾರಾಷ್ಟ್ರದ ಆನಂದತನಯ ರಾಮಜೋಶಿ ಮುಂತಾದವರು ತಂಜಾವೂರರಸರ ಆದರಕ್ಕೆ ಪಾತ್ರರಾಗಿದ್ದವರು. ಈ ಗಾಯಕರುಗಳಿಂದಲೇ ಹರಿಕಥೆ, ನಾಮ ಸಂಕೀರ್ತನೆ, ಭಜನೆಗಳು ಈ ಭಾಗದಲ್ಲಿ ವಾಡಿಕೆಗೆ ಬಂದಿತೆನ್ನುತ್ತಾರೆ. ಹೀಗಾಗಿ ಮೊದಲಿನಿಂದಲೂ ಪುರಂದರ ದಾಸರಿಗೂ ಮಹಾರಾಷ್ಟ್ರಕ್ಕೂ ನಂಟಿರುವುದು ಕಂಡುಬರುತ್ತದೆ.

ಇವರ ಜನ್ಮಸ್ಥಳ ಪೂನಾದ ಬಳಿ ಇರುವ ಪುರಂದರ ಘಡ ಎನ್ನುತ್ತಾರೆ. ಆದರೆ ಸಂಶೋಧಕ ರಾಗಲೀ ಇತಿಹಾಸಕಾರರಾಗಲೀ ಇದನ್ನು ಸಮರ್ಥಿಸುವುದಿಲ್ಲ. ಕಪಟರಾಳ ಕೃಷ್ಣರಾಯ ರೆಂಬುವರು ಮಹಾರಾಷ್ಟ್ರದ ಪುರಂದರ ಗಡವಲ್ಲ, ಶಿವಮೊಗ್ಗ ಜಿಲ್ಲೆಯ ಪುರಂದರ ಎಂಬ ಹೆಸರಿದ್ದ ಹಳ್ಳಿ ಎನ್ನುತ್ತಾರೆ. ಇದೂ ಕೇವಲ ಊಹೆಯೇ ಹೊರತು ಸಾ ಆಧಾರವಾದದ್ದಲ್ಲ. ಅಂತೂ ಪುರಂದದಾಸರು ಪುರಂದರ ಘಡದವರಲ್ಲದಿದ್ದರೂ ಪಂಡರಾಪುರದ ವಿಟ್ಠಲನ ಭಕ್ತರು ಈ ದೇವರೊಂದಿಗೆ ತಮ್ಮ ನಂಟನ್ನು ಕೊನೆಯವರೆಗೆ ಉಳಿಸಿಕೊಂಡು ಬಂದವರು. ಅಷ್ಟೇಕೆ ಹರಿದಾಸ ಪಂಥದ ಬಹುತೇಕ ದಾಸರುಗಳೆಲ್ಲಾ ತಮ್ಮ ಕೃತಿಗಳನ್ನು ಈ ದೇವನಿಗರ್ಪಿಸಿರುವುದು ಕಂಡು ಬರುತ್ತದೆ. ಭೀಮಾನದಿ (ಚಂದ್ರಭಾಗ) ತೀರದಲ್ಲಿ ನೆಲೆಸಿರುವ ಈ ದೈವ ಮಹಾರಾಷ್ಟ್ರದ ಸಂತರುಗಳಾದ ಜ್ಞಾನೇಶ್ವರರು, ನಾಮದೇವರು, ತುಕಾರಾಮರು, ನಿವೃತ್ತಿನಾಥರು, ರಾಮದಾಸರು ಎಲ್ಲರಿಗೂ ವಿಟ್ಠಲ ಚೈತನ್ಯ ಸ್ವರೂಪಿಆಗಿ ಆರಾಧ್ಯ ದೈವನಾಗಿದ್ದಾನೆ. ಪುರಂದದಾಸರ ಕೃತಿಗಳಲ್ಲಾ ಈ ದೈವದ ಅಂಕಿತದಲ್ಲೇ ಇದೆ.

1236ರಲ್ಲಿ ಕೆತ್ತಿಸಿರುವ ಹೊಯಸಳ ಸೋಮೇಶ್ವರನ ಶಾಸನದಿಂದ ನಮಗೆ ತಿಳಿದು ಬರುವುದೇನೆಂದರೆ, 1117ರಿಂದ 1137ರಲ್ಲಿ ಆಳಿದ ಬಿಟ್ಟಿದೇವ ಹೊಯ್ಸಳ ರಸ ಈ ಪ್ರದೇಶವನ್ನು ಗೆದ್ದು ಪಂಢರಿಗೆ ಎಂದು ಹೆಸರಿದ್ದ ಈ ಊರಿನಲ್ಲಿ ಪುಂಡಲೀಕನೆಂಬ ಭಕ್ತನಿಗಾಗಿ ಈ ದೇವಾಲಯವನ್ನು ಕಟ್ಟಿಸಿದನೆಂದೂ, ಬಿಟ್ಟಿದೇವನ ಹೆಸರೇ ಈ ದೇವರಿಗೆ ಬಂದಿತೆಂದೂ 'ಬಿಡಲ' ಕಾಲಕ್ರಮದಲ್ಲಿ ವಿಟ್ಠಲನೆಂದಾಯಿತೆಂದೂ ತಿಳಿಯುತ್ತದೆ. ಈ ಈ ವಿಷಯವನ್ನು ಎಮ್. ಎಸ್. ಮೋಹಿತೆಯವರು ತಮ್ಮ ಗ್ರಂಥವಾದ, (ಟೆಂಪಲ್ಸ್ ಅಂಡ್ ಲೆಜೆಂಡ್ ಆಫ್ ಮಹಾರಾಷ್ಟ್ರ) (ಭಾರತೀಯ ವಿದ್ಯಾಭವನ್ ಮುಂಬೈ 1962) ದಲ್ಲಿ ಉಲ್ಲೇಖಿಸಿದ್ದಾರೆ.

ಮಹಾರಾಷ್ಟ್ರದ ಅನೇಕ ಸಂತರು ವಿಠ್ಠಲನನ್ನು ಕನ್ನಡವನೆಂದು ಉಲ್ಲೇಖಿಸಿದ್ದಾರೆ. ಸಂತನಾಮ ದೇವರು ಕಾನಡಾ ವಿಟ್ಠಲ ಹೋ ಉಭಾ ಬಿವರೆತೀರಿ `ಭೀಮಾನದಿ ತೀರದಲ್ಲಿ ನಿಂತಿರುವ ವಿಠ್ಠಲ ಕನ್ನಡದವನು) ನಾಮಬರವೇ, ರೂಪ ಬರವೇ, ದರ್ಶನ ಬರನೇ ಕಾನಡಿಯಾ` (ಈ ಕನ್ನಡದವನ ರೂಪ ಸೊಗಸು, ದರ್ಶನ ಸೊಗಸು, ನಾಮವಂತೂ ಮೋಹಕ ಎಂದಿದ್ದಾರೆ. ಜ್ಞಾನ ದೇವರ ಅಭಂಗದಲ್ಲಿ `ಕಾನಡೂ ಹೋ ವಿಟ್ಠಲೂ ಕರ್ನಾಟಕೂ` ಎಂದಿದ್ದಾರೆ. ವಿಠ್ಠಲ ಕನ್ನಡದವನು, ಕರ್ನಾಟಕದವನು ಎಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಹಿಂದೆ ಈಗಿನಂತೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಎಂಬ ನಿರ್ದಿಷ್ಟತೆ ಇರಲಿಲ್ಲ. ಕನ್ನಡದವರು ಮಹಾರಾಷ್ಟ್ರದಲ್ಲೂ ಮಹಾರಾಷ್ಟ್ರದವರು ಕರ್ನಾಟಕದಲ್ಲೂ ಇರುತ್ತಿದ್ದರು. ವಿಜಯನಗರದ ಅರಸು ಕೃಷ್ಣದೇವರಾಯನು ಹಂಪೆಯಲ್ಲಿ ವಿಜಯ ವಿಟ್ಠಲನ ಗುಡಿಯನ್ನು ಕಟ್ಟಿಸಿದ್ದಾನೆ. ಇದಲ್ಲದೆ ಮಧ್ವಾಚಾರ್ಯರು ಸ್ಥಾಪಿಸಿದ್ದ ಅಷ್ಟ ಮಠಗಳಲ್ಲಿ ಎರಡಕ್ಕೆ ವಿಠ್ಠಲನ ಮೂರ್ತಿಯನ್ನು ಕೊಟ್ಟಿದ್ದಾರೆ. (ಶೀರೂರು, ಪುತ್ತಿಗೆ) ಪುರಂದರ ದಾಸರು ಕನ್ನಡದಲ್ಲೇ ತಮ್ಮ ರಚನೆಗಳನ್ನು ಮಾಡಿದ್ದರೂ ಅದು ವಿಠ್ಠಲನಿಗೆ ಸಂದಿದೆ. ಅವರ ಸಾಹಿತ್ಯ ಮೊದಲು ಊರ್ಜಿತವಾದದ್ದು ಮಹಾರಾಷ್ಟ್ರದಲ್ಲಿ ಶ್ರೀ ಪಾದರಾಯರು, ವ್ಯಾಸರಾಯರು ಮತ್ತು ಪುರಂದರದಾಸರು ಈ ಮೂವ್ವರ ಮೇಲೆ ಮರಾಠಿ ಸಂತ ವಾಙ್ಮಯದ ಪ್ರಭಾವ ಪ್ರಬಲವಾಗಿದೆ. ಪುರಂದರದಾಸರಿಗೆ ಮರಾಠೀ ಸಂತ ಮಾಲೆಯಲ್ಲಿ ಸ್ಥಾನವಿದೆ. `ಅಜಗಾಂವಕರರ `ಮಹಾರಾಷ್ಟ್ರ ಕವಿ ವಿಚರಿತೆ` ಯಲ್ಲಿ ಇವರ ಹೆಸರಿದೆ.

**ಪುರಂದರದಾಸರ ಜೀವನ ಚರಿತ್ರೆ**

ಇವರು ಪುರಂದರಘಡದವರು ಎನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆತಿಲ್ಲವೆಂದು ಆಗಲೆ ಹೇಳಿದೆ. ವಿಜಯದಾಸರು ಇವರಿಗಿಂತ ಹಿಂದಿದ್ದ ಪ್ರಸನ್ನ ವೆಂಕಟದಾಸರು ಹಾಗೂ ಜಗನ್ನಾಥ ದಾಸರ ಕೃತಿಗಳನ್ನು ಸಂಶೋಧಿಸಿರುವ ಸಂಶೋಧಕರ ಪ್ರಕಾರ ಪುರಂದರ ದಾಸರ ಜೀವನದೊಂದಿಗೆ ಹೆಣೆದುಕೊಂಡು ಬಂದಿರುವ ಕತೆಗೆ ಸಾಕಷ್ಟು ಆಧಾರಗಳಿಲ್ಲದಿದ್ದರೂ ಈ ಕತೆಯನ್ನು ಬಿಡುವಂತಿಲ್ಲ ಎಂದಿದ್ದಾರೆ.

ಶ್ರೀಮಂತನೂ, ಚಿನಿವಾರನೂ, ಕೃಪಣನೂ ಆಗಿದ್ದ ಶ್ರೀನಿವಾಸ ನಾಯಕನನ್ನು ಒಮ್ಮೆ ಪರೀಕ್ಷಿಸಲೋಸುಗ ತನ್ನ ಮಗನ ಮುಂಜಿಗೆ ಸಹಾಯ ಮಾಡಬೇಕೆಂದು. ಒಬ್ಬ ಬಡಬ್ರಾಹ್ಮಣನ ವೇಷದಲ್ಲಿ ಶ್ರೀ ಹರಿ ಬಂದ. ಕೃಪಣ ಶ್ರೀನಿವಾಸ ನಾಯಕ ಅವನನ್ನಟ್ಟಿದ ಬ್ರಾಹ್ಮಣ ಮತ್ತೆ ಮತ್ತೆ ಬಂದೇ ಬಂದ. ಬೇಸತ್ತ ನಾಯಕ ಹಣದ ರಾಶಿಯನ್ನು ಅವನ ಮುಂದೆ ಸುರಿದು ಒಂದು ದುಡ್ಡಾರಿಸಿಕೊಳ್ಳಲು ಹೇಳಿದ

ಬ್ರಾಹ್ಮಣ ನಗುತ್ತಾ ಒಲ್ಲೆನೆಂದು ಬಿಟ್ಟೋದ. ಶ್ರೀನಿವಾಸ ನಾಯಕನ ಹೆಂಡತಿಯ ಬಳಿ ಸಾರಿ ಆಕೆಯನ್ನು ಸಹಾಯಕ್ಕಾಗಿ ಯಾಚಿಸಿದ. ಆಕೆ ತನ್ನ ಅಸಹಾಯಕತೆಯನ್ನು ನೋಡಿಕೊಂಡು ತನ್ನ ಮೂಗಿನಲ್ಲಿದ್ದ ಮುತ್ತಿನ ಮೂಗುತಿಯನ್ನು ಮುಂಜಿಗೆ ಸಹಾಯಾರ್ಥವಾಗಿ ಕೊಟ್ಟಳು. ಅದನ್ನು ಶ್ರೀನಿವಾಸನಾಯಕನ ಬಳಿಗೇ ತೆಗೆದುಕೊಂಡು ಹೋಗಿ ಅದರ ಬೆಲೆ ಕಟ್ಟಿ ತನಗೆ ಕೊಡಬೇಕೆಂದು ಕೇಳಿದ ಹೆಂಡತಿಯ ಮೂಗುತಿಯನ್ನು ಗುರಿತಿಸಿದ. ಶ್ರೀನಿವಾಸನಾಯಕ 'ಇದು ತನ್ನ ಹೆಂಡತಿಯದೆಂದ' 'ಬೇರೆ ಇರಬಾರದೆಂದಿದೆಯೇ' ಎಂದು ಸವಾಲೆಸೆದು ಮೂಗುತಿಯನ್ನು ಬಿಟ್ಟು ಹೋದ. ಇದರ ಸತ್ಯಾ ಸತ್ಯತೆಯನ್ನು ಪರೀಕ್ಷಿಸಲು ಮನೆಗೆ ಧಾವಿಸಿದ ಶ್ರೀನಿವಾಸ ನಾಯಕ ಹೆಂಡತಿಯ ಬರಿ ಮೂಗನ್ನು ಕಂಡು 'ಮೂಗುತಿ ಎಲ್ಲಿ' ಎಂದು ಪ್ರಶ್ನಿಸಿದಾಗ ಆಕೆ 'ಮುರಿದಿದೆ' ಎಂದಾಗ 'ಅದನ್ನೇ ತಾ' ಎಂದು ಕಾದು ಕುಳಿತ. ತನ್ನ ಗಂಡನ ಕೃಪಣತೆಯನ್ನೂ ನಿಷ್ಠೂರತೆಯನ್ನೂ ಕಂಡಿದ್ದ ಪತ್ನಿ ವಿಷಪ್ರಾಶನ ಮಾಡಲು ಆಲೋಚಿಸಿ ಬಟ್ಟಲಿಗೆ ವಿಷ ಬಗ್ಗಿಸಿಕೊಂಡು ಕುಡಿಯಬೇಕೆಂದಿದ್ದಾಗ ಆ ಬಟ್ಟಲಿಗೇ ಮೂಗುತಿ ಬಿತ್ತು. ಅದನ್ನು ತೆಗೆದುಕೊಂಡು ಬಂದು ಗಂಡನಿಗೆ ಕೊಟ್ಟಳು. ಶ್ರೀನಿವಾಸನಾಯಕನಿಗೆ. ಈ ಘಟನೆಯಿಂದ ಜ್ಞಾನೋದಯವಾಯ್ತು. ತನ್ನ ಸರ್ವಸ್ವವನ್ನೂ ದಾನ ಮಾಡಿ ಹರಿದಾಸ ದೀಕ್ಷೆ ಪಡೆದು ಪುರಂದರ ದಾಸರಾದರು.

ಈ ಕಥೆಗೆ ಆಧಾರವಾಗಿ 'ಕೇಶವ ವಿಟ್ಠಲ' ಎಂಬ ಅಂಕಿತದ ಈ ಹಾಡು.

"ಪುರಂದರ ಗಡದೊಳಗೆ ಹಿರಿಯ ಸಾಹುಕಾರನೆನಿಸಿ"ರೆಂದು ಪ್ರಾರಂಭವಾಗುವ ಹಾಡು. ಇದರ ಕರ್ತೃ (ಈ ಅಂಕಿತದ) ದಾಸರು 19ನೇ ಶತಮಾನದಲ್ಲಿದ್ದರೆಂದು ಸಂಶೋಧಕರ ಅಭಿಪ್ರಾಯ ಮುತ್ತಿನ ಮೂಗುತಿಯ ಪ್ರಾಚೀನತೆ ಇಷ್ಟೇ: ಪುರಂದದಾಸರ ಅಂಕಿತದ ಇನ್ನೊಂದು ಪದವೂ ಈ ಕಥೆಗೆ ಅಂಟಿದೆ "ಎತ್ತ ಪೋದನಮ್ಮಾ ವಿಪ್ರನ ಎತ್ತ ಹುಡುಕಲಮ್ಮಾ"

ಪುರಂದರದಾಸರೇ ತಮ್ಮ ಹೆಂಡತಿಯನ್ನು ಕುರಿತಂತೆ, ಹಾಡಿ ಹೊಗಳಿರುವ ಪದ.

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತ ಲಿದ್ದೆ
ಹೆಂಡತಿ ಸಂತತಿ ಸಾಸಿರ ಆಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ

ಈ ಹಾಡಿನಲ್ಲಿ ತಮ್ಮ ಹೆಂಡತಿಯ ವ್ಯಕ್ತಿತ್ವವೇ ತಾವು ದಾಸರಾಗಲು ಕಾರಣವೆಂದು ನಿರೂಪಿಸಿದ್ದಾರೆ. ಸಾಧ್ವಿಯಾದ ಈಕೆ ತನ್ನ ಪತಿಯನ್ನು ಸನ್ಮಾರ್ಗಕ್ಕೂ, ಪಾರಮಾರ್ಥಿಕ ಮಾರ್ಗಕ್ಕೂ ಎಳೆದಿರಬೇಕು ಅದಕ್ಕಾಗಿ ಮೂಗುತಿಯ ಕಥೆಯಂತಹ ಚಾತುರ್ಯ ನಡೆಯಬೇಕಾದ್ದೇನಿಲ್ಲ. ಅವರು ಜಿಪುಣರಾಗಿದ್ದರೆಂದುದಕ್ಕೂ ಯಾವ ಆಧಾರವೂ ದೊರೆಯುವುದಿಲ್ಲ. ಆದರೆ ವಿಜಯದಾಸರಿಂದ ಅವರಲ್ಲಿ (ಪುರಂದರದಾಸರಲ್ಲಿ) ಆಧ್ಯಾತ್ಮಿಕ ಪ್ರವೃತ್ತಿ ಇರಲಿಲ್ಲವೆಂದು ತಿಳಿಯುತ್ತದೆ. ಅಂತೂ ಪ್ರಾಪಂಚಿಕ ಸುಖಭೋಗದಲ್ಲಿ ಮುಳುಗಿದ್ದವರಿಗೆ ವೈರಾಗ್ಯ ಹುಟ್ಟಿತು. ತಮ್ಮದನ್ನೆಲ್ಲಾ ದಾನ ಮಾಡಿ ವ್ಯಾಸರಾಯ ಸ್ವಾಮಿಗಳಿಂದ ದೀಕ್ಷೆ ಪಡೆದು ಹರಿದಾಸರಾದರು ಮತ್ತು 'ಪುರಂದರ' ಎಂಬ ಅಂಕಿತವನ್ನೂ ಪಡೆದರು. ಅವರೇ ಒಂದು ಸೂಳಾದಿಯಲ್ಲಿ ಗುರುಮುಖೇನ ಹರಿದಾಸದೀಕ್ಷೆ ಪಡೆದಿದ್ದನ್ನೂ ಅಂಕಿತ ಪಡೆದದ್ದನ್ನೂ ಹೇಳಿದ್ದಾರೆ.

'ಅಂಕಿತ ವಿಲ್ಲದ ದೇಹ ನಿಷೇಧ
ಅಂಕಿತ ವಿಲ್ಲದ ಕಾವ್ಯ ಶೋಭಿಸದು
ಅಂಕಿತವಿಲ್ಲದೆ ಇರಬಾರದೆಂದು ಚ
ಕ್ರಾಂಕಿತ ವನು ಮಾಡಿ ಎನ್ನಂಗಕೆ
ಪಂಕಜನಾಭ ಪುರಂದರ ವಿಠಲನ
ಅಂಕಿತ ವೆನಗಿತ್ತ ಗುರುವ್ಯಾಸಮುನಿರಾಯ'

ಎಂದು ತಮಗೆ ಅಂಕಿತ ಹಾಗೂ ದಾಸದೀಕ್ಷೆ ವ್ಯಾಸರಾಯರಿಂದ. ದೊರೆಯಿತೆಂದು ಹೇಳಿದ್ದಾರೆ. ದಾಸರು ಮೊದಲಿಗೆ ಭಾಗವತ ಸಂಪ್ರದಾಯದ ವೈಷ್ಣವರಾಗಿದ್ದರೆಂದೂ, ವ್ಯಾಸರಾಯರಿಂದ ಅವರಿಗೆ ತಪ್ತ ಮುದ್ರಾಂಕನವೂ, ಮೂಲ ಮಂತ್ರೋಪದೇಶವೂ, ಹರಿದಾಸದೀಕ್ಷೆ ಮತ್ತು ಕಾವ್ಯಾಂಕಿತಗಳು ದೊರೆತು ಮಾಧ್ವ ವೈಷ್ಣವ ಗೃಹಸ್ಥರಾದರೆಂದು ಹರಿದಾಸ ಪಂಥದವರ ನಂಬಿಕೆ.

ಪ್ರಭಾವ : ನಮ್ಮ ಹರಿದಾಸರೂ ಹಾಗೂ ಅವರ ಸಾಹಿತ್ಯವೂ ಭಾರತದ ಭಕ್ತಿ ಪಂಥದ ಒಂದು ಶಾಖೆ, ಹಾಗೂ ಕೊಡುಗೆ. ಪುರಂದರದಾಸರು ತಮ್ಮ ಎಳೆತನದಲ್ಲಿ ಇದ್ದ ಪ್ರದೇಶದಲ್ಲಿ ಭಕ್ತಿ ಪಂಥ ಹರಡಲು ಮುಖ್ಯಕಾರಣ ಕರ್ತರು ಮರಾಠಿ ಸಂತರು. ಇವರೊಂದಿಗೆ ಮಹಾನುಭಾವ ಪಂಥದ ಪ್ರಾಬಲ್ಯವೂ ಇದ್ದಿತು. ಈ ಪಂಥದ ಸಂತರು ಸೌರಾಷ್ಟ್ರದ ಚಕ್ರಧರರೆಂಬುವರು (ಜನ್ಮ 1153) ಈ ಪಂಥವು ಉತ್ತರ ಕರ್ನಾಟಕ, ಮಹಾರಾಷ್ಟ್ರವರ ಹಾಡ, ಗುರ್ಜರ ಇಲ್ಲೆಲ್ಲಾ ಪ್ರಭಾವವನ್ನು ಬೀರಿತ್ತು. ಇದನ್ನು 'ಅಚ್ಯುತ' ಪಂಥವೆಂದು ಕರೆಯುವ ವಾಡಿಕೆ ಇದೆ. ಇದರ ಪ್ರಭಾವಕ್ಕೆ ಮರಾಠಿಸಂತರು ಅದರಲ್ಲೂ ಜ್ಞಾನ ದೇವರು ಈ ಪಂಥದ ಪ್ರಭಾವಕ್ಕೆ ಒಳಗಾದವರು. ವೈದೀಕ ಚೌಕಟ್ಟಿನಲ್ಲೇ ಇವರ ಆಚಾರ ವಿಚಾರ, ಧರ್ಮ ಕರ್ಮಗಳಿದ್ದರೂ ವರ್ಣಾಶ್ರಮ ವೈವಿಧ್ಯತೆಯ ಕಡೆ ಇವರು ಗಮನ ಹರಿಸಿಲ್ಲ; ವೈದೀಕ ಕರ್ಮದವರ ಮಡಿವಂತಿಕೆಯನ್ನು ಇವರು ಪುರಸ್ಕರಿಸುವುದಿಲ್ಲ. ಧಾರ್ಮಿಕ ವಿಚಾರದಲ್ಲೂ, ದಿನನಿತ್ಯ ವ್ಯವಹಾರದಲ್ಲೂ, ಸ್ತ್ರೀಪುರುಷರು ಸಮಾನರು ಈ ಪಂಥದವರು ಭಗವದ್ಗೀತೆ ಹಾಗೂ ಭಾಗವತವನ್ನು ಆದರಿಸಿದರು. ಇವರು ಪ್ರೋತ್ಸಾಹಿಸಿದ ಭಾಗವತ ಧರ್ಮ ಈ ಭಾಗದಲ್ಲೆಲ್ಲಾ ಬೇರೂರಿದ ಮೇಲೆ ವಿಠ್ಠಲ ಉಪಾಸನೆಗೆ ಹೆಚ್ಚಿನ ಒತ್ತಾಸೆ ಸಿಕ್ಕಿತು. ಹದಿಮೂರನೇ ಶತಮಾನದ ವೇಳೆಗೆ ಈ ಭಾಗದಲ್ಲಿ ಮಹಾನುಭಾವ ಪಂಥ ಭಾಗವತ ಧರ್ಮ, ವಿಠ್ಠಲ ಭಕ್ತಿ ಇವು ಹರಡಿಕೊಂಡಿದ್ದುವು. ಈ ಮೂರಕ್ಕೂ ವಿರೋಧವಿಲ್ಲದೆ ಶ್ರೀ ಮಧ್ವಾಚಾರ್ಯ ಮಧ್ವಮತ ವೈಷ್ಣವ ಸಂಪ್ರದಾಯ ಮೈ ತಳೆಯಿತು. ತುಳಸೀ ಮಣಿ, ದ್ವಾದಶನಾಮ, ಹರಿನಾಮ ದೀಕ್ಷೆಯ ಜೊತೆಗೆ ತಪ್ತ ಮುದ್ರಾಂಕನ ಮಧ್ವಮತದಲ್ಲಿ ಸೇರಿತು ಎನ್ನುತ್ತಾರೆ.

ದಕ್ಷಿಣದ ವೈಭವದ ಹಿಂದೂ ಸಾಮ್ರಾಜ್ಯದರಸರು ತಮ್ಮ ರಾಜ್ಯದಲ್ಲಿ ಯಾವುದೇ ಒಂದು ಮತಕ್ಕೆ ನಿಷ್ಠೆತೋರಿಸಿರುವುದು ಕಂಡು ಬರುವುದಿಲ್ಲ.

ವಿಜಯನಗರ ಸ್ಥಾಪನೆಯಾದ ಕಾಲಕ್ಕೆ ಹಕ್ಕ ಬುಕ್ಕರಿಗೆ ಗುರುವಾಗಿ ಹಾಗೂ ಮಾರ್ಗದರ್ಶಕರಾಗಿ ವಿದ್ಯಾರಣ್ಯರನ್ನು ಕಾಣುತ್ತೇವೆ. ಇವರು ಅದ್ವೈತ ತತ್ವಪ್ರವರ್ತಕರಾದ ಆದಿ ಶಂಕರರ ಪೀಳಿಗೆಯಲ್ಲಿ ಬರುವವರು ನಂತರ ಪಾಶುಪತಪ್ರಕ್ರಿಯೆ (ಶೈವ ಸಂಪ್ರದಾಯ) ಕ್ರಿಯಾ ಶಕ್ತಿ ಗುರುಗಳ ಪ್ರಭಾವವಿದ್ದಿತು; ಆನಂತರ ಶ್ರೀ ವೈಷ್ಣವ ಪಂಥಕ್ಕೆ ಸೇರಿದ ಶ್ರೀ ತಾತಾಚಾರ್ಯರ ಪ್ರಭಾವ ಹೆಚ್ಚಿತು. ಇದಲ್ಲದೆ ಶ್ರೀ ಕೃಷ್ಣದೇವ ರಾಯನ ಕಾಲದಲ್ಲಿ ಶ್ರೀ ವ್ಯಾಸರಾಯ ಸ್ವಾಮಿಗಳ ಪ್ರಭಾವ ಉಂಟಾಯ್ತು. ಅದಕ್ಕೂ ಹಿಂದೆ ಸಾಳ್ವ ನರಸಿಂಹನ ಕಾಲದಲ್ಲಿ ಶ್ರೀ ಪಾದರಾಯರ ಪ್ರಭಾವವಿದ್ದಿತು. ಯಥಾರಾಜ ತಥಾಪ್ರಜಾ ಎಂಬ ಮಾತಿನಂತೆ, ತಮ್ಮ ದೊರೆಗಳ ಮನೋವೈಶಾಲ್ಯತೆಯ ಪ್ರಭಾವ ಜನತೆಯ ಮೇಲೆ ಆಗದೆ ಇರಲಿಲ್ಲ. ಈ ಪರಿಸರ ಪುರಂದರದಾಸರ ಮೇಲೆಯೂ ಪ್ರಭಾವ ಬೀರತು ಹಾಗೂ ಅವರನ್ನು ಏಕ ಮತ ನಿಷ್ಠೆತೆಗಿಂತಲೂ, ಸಂತ ಶ್ರೇಣಿಗೆ ಸೇರಿಸಿತು. ತಾವು ಮೆಚ್ಚಿದ ಹಾಗೂ ನೆಚ್ಚಿದ ಮಧ್ವಮತದ ಅಭಿಮಾನ ದಾಸರಲ್ಲಿದ್ದರೂ, ಕಣ್ಣುಕುಕ್ಕುವಷ್ಟು ಮತದ ಛಲ ಕಂಡು ಬರುವುದಿಲ್ಲ.

ಪುರಂದರದಾಸರು ವಿಜಯನಗರದ ಉಚ್ಛ್ರಾಯ ಸ್ಥಿತಿಯನ್ನೂ, ನಂತರದ ಒಳಜಗಳದ ವಿಕ್ಷಿಪ್ತ ಪರಿಸ್ಥಿತಿಯನ್ನೂ ನಂತರ ಹಾಳಾದ ಹಂಪೆಯ ಪರಿಸ್ಥಿತಿಯನ್ನು ಕಂಡಿರಬೇಕು. 'ಸ್ವರ್ಣಯುಗ'ವೆಂದು ಕರೆಸಿಕೊಳ್ಳುವ ಕಾಲ ಕೃಷ್ಣದೇವರಾಯನ ಕಾಲ. ಈ ಸಮಯದಲ್ಲಿ ಅವರಿಗೆ 45 ವರ್ಷವಿರಬಹುದು ಹಾಗೂ ಹರಿದಾಸ ದೀಕ್ಷೆ ಪಡೆದಾಗಿತ್ತು. ಕೃಷ್ಣ

ದೇವರಾಯನ ಕಾಲ 1509ರಿಂದ 1530. ಈತ ಉದಾರಿ, ಧರ್ಮಶ್ರದ್ಧೆ ಉಳ್ಳವನು, ಕಲಾಭಿಮಾನಿ, ರಸಿಕ, ಪಂಡಿತೋತ್ತಮನೂ, ಪಂಡಿತ ಪೋಷಕನೂ ಆಗಿದ್ದ. ಧಾರ್ಮಿಕ ವಿಷಯದಲ್ಲಿ ಈತ ವೈಷ್ಣವ ಮತಾನುಯಾಯಿ ಆಗಿದ್ದರೂ ಎಲ್ಲ ಧರ್ಮೀಯರನ್ನೂ ಆದರಿಸುತ್ತಿದ್ದನು. ಬಹುಮನೀ ಸುಲ್ತಾನನಾದ ಅಹಮದ್‌ಶಾಹನು ಪಿತೂರಿಯಿಂದ ಸೆರೆಯಲ್ಲಿದ್ದನು; ಕೃಷ್ಣದೇವರಾಯನು ಬೀದರನ್ನು ಮುತ್ತಿ ಅಹಮದ್‌ಶಾಹನನ್ನು ಸೆರೆಯಿಂದ ಬಿಡಿಸಿ ಮತ್ತೆ ಅವನಿಗೆ ಪಟ್ಟಕಟ್ಟಿ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂದು ಹೊಗಳಿಸಿಕೊಂಡವ ರಾಜನ ಉದಾರನೀತಿ ಪ್ರಜೆಗಳಲ್ಲಿ ಉದಾರ ನೀತಿ ಧಾರ್ಮಿಕ ಸಹಿಷ್ಣುತೆ ಬೆಳೆಯುವಂತೆ ಮಾಡಿತು. ಎಲ್ಲಾ ಸಂಪ್ರದಾಯದವರನ್ನೂ ಸನ್ಮಾನದಿಂದ ಕಾಣುತ್ತಿದ್ದ ಅವನು ಗುರುಗಳಾದ ವ್ಯಾಸರಾಯರ ವಿಷಯದಲ್ಲಿ ಎಲ್ಲಿಲ್ಲದ ಭಕ್ತಿ ಈತನಿಗಿತ್ತು. ಉದಾರ ನೀತಿಯ ಪ್ರತೀಕವೇ ಪುರಂದರದಾಸರು. ಅವರ ಕೆಲದೇವರ ನಾಮಗಳನ್ನು ನೋಡಿದರೆ ಇವರು 'ಹರಿ ಸರ್ವೋತ್ತಮ'ನೆಂದು ಸಾರುವ ವೈಷ್ಣವಮ ತಾನುಯಾಯಿಗಳಾಗಿದ್ದರೂ 'ಶಿವದರುಶನ ತಮಗಾಯಿತೆಂದೂ' ತಾವೂ ವೀರಭದ್ರ ಪ್ರೀಯರೆಂದೂ ತಮ್ಮನ್ನು ಬಣ್ಣಿಸಿಕೊಂಡಿದ್ದಾರೆ. ಸದ್ಗುರುವು ತಮ್ಮನ್ನು ಫಕೀರ (ಮಹಮ್ಮದೀಯ ರಲ್ಲಿಯ ದಾಸರು) ವನ್ನಾಗಿ ಮಾಡಿದುದನ್ನು ನೆನೆಸಿಕೊಂಡು 'ತುರುಕರು ಕರೆದರೆ ಉಣಬಹುದು' ಎಂದು ಮಾರ್ಮಿಕವಾಗಿ ಹಾಡಿದ್ದಾರೆ. 'ಧ್ರುವಗೊಲಿದು ಪದವಿ ಇತ್ತವನನ್ನು ಕರಿಮೊರೆ ಕೇಳಿದ' ಶ್ರೀಶನನ್ನು ಹುಸ್ಸೇನ್ ಎಂದು. ಕರೆದು 'ಅರಿತು ಬಂದೆನಲ್ಲಿ ಪುರಂದರ ವಿಠಲನಲ್ಲದಿಲ್ಲಲ್ಲಾ' ಎಂದು ಹೇಳಿದರು 'ಅಲ್ಲಾ ಖುದಾ ಎಂದು ಆತ್ಮದಲ್ಲಿ ತಿಳಿಯದೆ ಮುಲ್ಲ ಶಾಸ್ತ್ರದ ನೆಲೆಯ ತಾನರಿಯದೆ' ಎಂದು ಮರುಗಿದ್ದಾರೆ. 'ಅರಿಯದೆ ಬಂದೆವು. ಕಿಮ್ಸನ್ ಪರಿಹರಿಸಯ್ಯ ಬಮ್ಸನ್ ಪರಿಪರಿಯಿಂದಲೆ ಹರಿಹರಿ ಎಂದರೆ ದುರಿತಭಯ ಬಂದಿಲ್ಲಲ್ಲಾ' ಎಂದೇ ಮುಂತಾಗಿ ಹಾಡಿದ್ದಾರೆ. ಇದನ್ನೆಲ್ಲಾ ಅವರು ಹುಡುಗಾಟಕ್ಕೆ ಹಾಸ್ಯಕ್ಕೆ ಹಾಡಿದುದಲ್ಲ. ದೇವನೊಬ್ಬನೇ ಅವನನ್ನು ಯಾವಧರ್ಮೀಯರು ಏನೆಂದು ಕರೆದರೇನು ಎಂಬ ನಂಬಿಕೆ ಅವರ ಒಡಲಾಳದಲ್ಲಿ ಬೇರೂರಿದ್ದರಿಂದಲೇ ಇಂತಹ ಪದಗಳ ರಚನೆ ಮಾಡಿದ್ದಾರೆಂದು ಪ್ರೊ. ರಾಮಚಂದ್ರರಾವ್ ಹೇಳಿದ್ದಾರೆ. ಮುಂದೆ ಬಂದ ಅಥವಾ ಇವರಿಗಿಂತ ಹಿಂದಿದ್ದ ದಾಸರುಗಳಾರಲ್ಲೂ ಈ ಮನೋ ವೈಶಾಲ್ಯತೆ ಕಾಣಸಿಗುವುದಿಲ್ಲ.

(ಮುಂದುವರಿಯುವುದು)

# ಶ್ರೀಮತಿ ಗಾಯತ್ರಿ ಸುಬ್ಬರಾವ್

● ರಮಾಕೃಷ್ಣ

ಅಸೋಸಿಯೇಷನ್ನಿನ ಸಂಗೀತ ಪ್ರಿಯ ಸದಸ್ಯರಿಗೆ, ಶ್ರೀಮತಿ ಗಾಯತ್ರಿ ಸುಬ್ಬರಾಯರ ಸುಶ್ರಾವ್ಯ ಸಂಗೀತವನ್ನು ಕೇಳುವ ಅವಕಾಶ ಕೆಲವು ದಿನಗಳ ಹಿಂದೆ ಸಿಕ್ಕಿತು. ನಮ್ಮ ಹಿರಿಯ ಸದಸ್ಯರಾದ ಶ್ರೀಮತಿ ಸೀತಮ್ಮರಾವ್‌ಗೆ ಇವರು ಪರಿಚಿತರು. ಹಾಗಾಗಿ ಇವರು ಮುಂಬೈಗೆ ಬಂದಿರುವ ವಿಷಯ ತಿಳಿದು, ಸೀತಮ್ಮನವರು ಅಸೋಸಿಯೇಷನ್ನಿನಲ್ಲಿ ಇವರ ಕಾರ್ಯಕ್ರಮ ಏರ್ಪಡಿಸುವದರ ಬಗ್ಗೆ ಪ್ರಸ್ತಾವನೆ ಮಾಡಿದರು. ಅವರು ಹಿಂತಿಗುರುವ ದಿನ ಹತ್ತಿರವಿದ್ದರಿಂದ, ಹೆಚ್ಚು ಸಮಯವಿರಲಿಲ್ಲ. 'ರಾಮನವಮಿ'ಯ ದಿವಸ ಅಸೋಸಿಯೇಷನ್ನಿನ ಕಲಾವಿದರಿಂದ ಒಂದು ಘಂಟೆ ಕಾಲದ ಭಜನೆಯ ಕಾರ್ಯಕ್ರಮವಿದೆ. ಆದಾದ ನಂತರ ಇವರ ಕಾರ್ಯಕ್ರಮವನ್ನು ಏರ್ಪಡಿಸಬಹುದು. ಉತ್ತಮ ಕಲಾವಿದರಿಗೆ ಸಾಕಷ್ಟು ಸಮಯಾವಕಾಶ ವಾಗದಿರಬಹುದು. ಅವರು ಒಪ್ಪುವರೇ ಅಂತ ಸೀತಮ್ಮನರಿಗೆ ಕೇಳಿದೆವು ಸೀಮತ್ಮನವರು ಈ ವಿಷಯಾನ ತಿಳಿಸಿದಾಗ ಶ್ರೀಮತಿ ಗಾಯತ್ರಿ ಸುಬ್ಬರಾವ್ ಅವರು ಸಂತೋಷದಿಂದ ಒಪ್ಪಿಕೊಂಡು ಆದಿನದ ಕಾರ್ಯಕ್ರಮ ನಡೆಸಿಕೊಟ್ಟಿದ್ದು ಅವರ ದೊಡ್ಡತನವನ್ನು ತೋರಿಸುತ್ತೆ.

ಶ್ರೀಮತಿ ಗಾಯತ್ರಿ ಸುಬ್ಬರಾವ್‌ರವರ ಸಂಗೀತ ಕೇವಲ ಅಭ್ಯಾಸದಿಂದ ಬಂದಕಲೆಯಲ್ಲದೆ ವಂಶಪಾರಂಪರ್ಯವಾಗಿ ಬಂದ ಕಲೆಯಾಗಿದೆ. ಕಲಾವಿದರ ಮನೆತದಲ್ಲಿ ಹುಟ್ಟಿದ ಭಾಗ್ಯ ಇವರದಾಗಿದೆ. ಇವರ ತಂದೆ ಶ್ರೀ ರಾಮಕೃಷ್ಣಶಾಸ್ತ್ರಿಗಳು ಸಾಹಿತ್ಯ, ಗಾಯನ ಹಾಗೂ ಹರಿಕಥೆಗಳಲ್ಲಿ ಪ್ರಾವೀಣ್ಯತೆ ಪಡೆದವರಾಗಿದ್ದರು ಹಾಗೂ ಮೈಸೂರರಸರ ಆಸ್ಥಾನ ವಿದ್ವಾಂಸರಾಗಿದ್ದರು.

ಗಾಯತ್ರಿ ಸುಬ್ಬರಾವ್‌ರವರ ಅಣ್ಣಂದಿರಾದ ಹೆಚ್. ಆರ್. ಸೀತಾರಾಮ ಶಾಸ್ತ್ರಿಗಳು 'ಗಾನ ಕೋಗಿಲೆ' ಎಂಬ ಬಿರುದು ಪಡೆದ ವಿದ್ವಾಂಸ ರಾಗಿದ್ದರು. ಇವರು ಚನ್ನಕೇಶವಯ್ಯನವರಲ್ಲೂ, ಪಿಟೀಲು ವಿದ್ವಾನ್ ಶ್ರೀ ಚೌಡಯ್ಯನವರಲ್ಲೂ ಶಿಷ್ಯವೃತ್ತಿ ಮಾಡಿದವರು. ಇವರು ತಮ್ಮದೇ ಆದ 'ಸಂಗೀತ ಕಾಲೇಜ್ ಅಯ್ಯನಾರ್'ನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಕೆಲಸ ಮಾಡಿದವರು, ಇವರು ಬೆಂಗಳೂರು ಆಕಾಶವಾಣಿಯಲ್ಲಿ 'A' High grade ನ ಕಲಾವಿದರಾಗಿದ್ದವರು ಅದಲ್ಲದೆ ಅಖಿಲಭಾರತ ರಾಷ್ಟ್ರೀಯ ಸಂಗೀತ ಕಾರ್ಯಕ್ರಮಕ್ಕೆ ಮೊಟ್ಟಮೊದಲು ಆಯ್ಕೆಯಾಗಿ ಮುಂಬೈಗೆ ಬಂದು ಹಾಡಿದ ಕಲಾವಿದರಾಗಿದ್ದರು. ಹಾಗೂ ಸತತವಾಗಿ 5 ವರ್ಷ ಕರ್ನಾಟಕ ಸರಕಾರದ ವಿದ್ಯಾರ್ಥಿ ವೇತನ ಪಡೆದ ಗೌರವ ಇವರದಾಗಿದೆ.

ಇಂತಹ ಹಿನ್ನೆಲೆಯಿಂದ ಬಂದ ಶ್ರೀಮತಿ ಗಾಯತ್ರಿ ಸುಬ್ಬರಾವ್‌ರವರು ದೈವದತ್ತವಾದ ಮಧುರ ಕಂಠವನ್ನು ಪಡೆದ ಗಾಯಕಿಯಾಗಿದ್ದು ವಿದ್ವಾನ್ ಶ್ರೀಮಾನ್ ಚೆನ್ನಕೇಶವಯ್ಯನವರಲ್ಲಿ ತಮ್ಮ ಎಂಟನೇ ವಯಸ್ಸಿನಿಂದಲೇ ಸಂಗೀತಭ್ಯಾಸ ಮಾಡಿದವ ರಾಗಿದ್ದಾರೆ. ಇವರು ಬೆಂಗಳೂರಿನ ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಬೆಂಗಳೂರಿನ 'ಗಾಯನ ಸಮಾಜ', 'ಸಿಟಿ ಇನ್ಸಿಟ್ಯೂಟ್' ಮುಂತಾದ ಪ್ರತಿಷ್ಠಿತ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿದ ಗೌರವ ಇವರದಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆಯಾದ ಶ್ರೀಮತಿ ಮಾಯಾರಾವ್‌ರವರ ನೇತೃತ್ವದಲ್ಲಿ ಭರತನಾಟ್ಯ, ಕೂಚಿಪುಡಿ ಇತ್ಯಾದಿ ನಾಟ್ಯಗಳಿಗೆ ನಟುವಾಂಗ ಗಾಯಕರಾಗಿ ಭುವನೇಶ್ವರಕ್ಕೆ ಹೋಗಿ ಬಂದವರಾಗಿದ್ದಾರೆ. ಹಾಗೂ 'ಜಾಕ್‌ಸನ್' 'ಅಟ್ಲಾಂಟ ನಾಶ್‌ವಿಲೆ' ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಭರತನಾಟ್ಯ ಪ್ರವೀಣೆಯಾದ ರಶ್ಮಿ ಹೆಗ್ಗಡೆ, ಕನ್ನಡ ಚಿತ್ರ ನಟಿ ಮಂಜುಳ, ಹಾಗೂ ಬಾಲನಟ ಸುನಿಲ್ ಶಂಭು ಮುಂತಾದವರಿಗೆ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ದೂರದರ್ಶನಲ್ಲಿ ಹಾಡಿದ್ದಾರೆ.

ರಾಮನವಮಿಯಂದು ಇವರು ದರ್ಬಾರು ರಾಗ ಆದಿ ತಾಳದ 'ಚಾಲ ಮೇಲ' ಎಂಬ ವರ್ಣದಿಂದ ಕಾರ್ಯಕ್ರಮ ಪ್ರಾರಂಭಿಸಿದರು. ನಂತರ ಗಣಪತಿಯ ಮೇಲೆ ನಾಟರಾಗದಲ್ಲಿ 'ಮಹಾಗಣಪತಿಂ ಮನಸಾಸ್ಮರಾಮಿ' ಹಾಡಿದ ನಂತರ ಗೌಳರಾಗದಲ್ಲಿ ವಿಸ್ತಾರವಾದ ಆಲಾಪನೆ ಮಾಡಿ 'ಪ್ರಣ ಮಾಮ್ಯಹಂ ಶ್ರೀ ಗೌರೀ ಸುತಂ' ಕೀರ್ತನೆಯನ್ನು ಹಾಡಿ ಸ್ವರ ಪ್ರಸ್ತಾರ ಮಾಡಿದರು. ಪಾರ್ವತೀ ಪತಿ. ಪ್ರಣಮಾಮಿ ಸತತಂ ಎಂಬ ಹಂಸಧ್ವನಿಯಲ್ಲಿ ಕೀರ್ತನೆ ಹಾಡಿದ ನಂತರ ಗಮನಶ್ರಮದಲ್ಲಿ 'ಅಲ್ಲಿನೋಡಲು ರಾಮ' ಎಂಬ ಪುರಂದರ ದಾಸರ ದೇವರನಾಮ ಹಾಡಿದರು. ನಂತರ ಮೋಹನ ರಾಗದಲ್ಲಿ ಆರಾದನೆ ಹಾಡಿ 'ಪಾಹಿ ಮಾಂ ಪಾರ್ವತಿ ಪರಮೇಶ್ವರಿ' ಎಂಬ ಕೀರ್ತನೆ ಹಾಡಿ ನರುವಲ್, ಸ್ವರ ಪ್ರಸ್ತಾರ ಹಾಡಿದರು.

ಹಿಂದೀ ಭಜನೆ 'ಸಬಸೇ ಉಂಚೀ ಪ್ರೇಮಕ ಧಾಯಿ' ಹಾಡಿ ಗುರುಗುಹರ ಮಣಿರಂಗು ರಾಗದ 'ಮಾಮನ ಪಟ್ಟಾಭಿರಾಮ' ಸೊಗಸಾಗಿ ಸಾದರ ಪಡಿಸಿದರು.

ರಾಮನಾಮ ಮಂಗಳದೊಂದಿಗೆ ಗಾಯನ ಕಾರ್ಯಕ್ರಮ ನೀಡಿದ ಗಾಯತ್ರಿ ಸುಬ್ಬರಾವ್ ಒಬ್ಬ ಉತ್ತಮ ಮಟ್ಟದ ಕಲಾವಿದೆಯಾಗಿದ್ದಾರೆ. ವೈಲಿನ್ ರಂಗನಾಯಕಿ ಕೃಷ್ಣನ್, ಮೃದಂಗ ಶಶಿಧರಂ. ಶ್ರೀರಾಮ ಮತ್ತು ಗಣಪತಿಗೆ ಮಂಗಳಾರತಿಯ ನಂತರ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ ಮುಗಿಯಿತು. ●

# ಚೌಕಟ್ಟು

●ಡಾ. ಮಂಜುನಾಥ್

> ಚೌಕಟ್ಟು - ಇದು
> 'ಕನ್ನಡಿ' ಕಥಾ ಸಂಗಮದ
> ಮೂರನೆಯ ಹಾಗೂ ಕೊನೆಯ ಕಥೆ

ಗುಂಡಿ ಚಿಕ್ಕಮ್ಮ, ನಿಜವಾಗಿಯೂ ನಮ್ಮ ಚಿಕ್ಕಮ್ಮ ಅಲ್ಲ. ಆಕೆ ನಮ್ಮ ಅಮ್ಮನ ಚಿಕ್ಕಮ್ಮ. ಅಮ್ಮ ಹಾಗೆ ಕರೀತಿದ್ರಿಂದ ನಮ್ಮ ಚಿಕ್ಕಜ್ಜಿ ನಮಗೂ ಚಿಕ್ಕಮ್ಮ ಆಗಿ ಬಿಟ್ಟಿದ್ರು. ಅವರು ಬಹಳ ಹಠ ಸ್ವಭಾವದವರು ಅಂತ ಮಿಕ್ಕ ಎಲ್ರೂ ಅಂದ್ರೂ ನನಗೆ ಆಕೆ ಯಾವಾಗಲೂ, ಒಬ್ಬ ಅಭಿಮಾನಿ ಹಾಗೂ ಛಾತಿ ಇರುವ ಹೆಣ್ಣು ಅಂತ ಅನ್ನಿಸಿತ್ತು. ಮಲ ಅಣ್ಣಂದಿರು, ಚಿಕ್ಕಪ್ಪಂದಿರು, ಇದ್ದ ಇವಳೊಬ್ಬಳನ್ನ ಬೇಗ ಸಾಗಿ ಹಾಕಿದ್ರೆ ತಮಗೆ ಸುಖ ಅಂತ ತಿಳಿದು, ಎರಡನೆಯ ಸಂಬಂಧ ಅಂತ ನಾಯಕ್ ರಾಮರಾಯರಿಗೆ ಕೊಟ್ರು. ರಾಮರಾಯರಿಗೆ ಆರೋಗ್ಯಾನೂ ಇರಲಿಲ್ಲ. ಹನ್ನೊಂದು ವರ್ಷದ ಹುಡುಗಿ ಗಂಡನ ಮನೆ ವಹಿವಾಟೆಲ್ಲ ತನ್ನ ಕೈಗೆ ತಗೊಂಡು, ಚೆನ್ನಾಗಿ ನಿರ್ವಹಣೆ ಮಾಡಿದ್ಲು. ಈ ಅನುಭವ ಚಿಕ್ಕಮ್ಮನ್ನ ಗಟ್ಟಿ ಮಾಡಿಬಿಡ್ತು. ನಾಲ್ಕು ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು ಚಿಕ್ಕಮ್ಮಂಗೆ. ಚಿಕ್ಕಮ್ಮ, ಚಿಕ್ಕಪ್ಪನ್ನ ಎಷ್ಟು ಚೆನ್ನಾಗಿ ನೋಡಿಕೋತಿದ್ರು ಅಂದ್ರೆ, ಬೇರೆಯವರು ನೋಡಿ ಕಲೀಬೇಕು. ಅವರಿಗೆ ಯಾವಾಗಲೂ ಚಿಕ್ಕಪ್ಪನ ಆರೋಗ್ಯದ ಚಿಂತೆ ಇರ್ತಿದ್ರಿಂದ ಅವರನ್ನ ಒಬ್ಬರನ್ನೇ ಎಲ್ಲೂ ಹೋಗೋಕೆ ಬಿಡ್ತಿರಲಿಲ್ಲ. ನಾಯಕ ರಾಮರಾಯರು. ಬಹಳ ಅನುಕೂಲವಾದ ಜಮೀನ್ದಾರರು ನಮ್ಮ ಚಿಕ್ಕಮ್ಮನ ಪ್ರಾರ್ಥನೆ ಯಾವಾಗಲೂ ಒಂದೇ ಆಗಿತ್ತು. "ದೇವರೇ! ನನಗೆ ಮುತ್ತೈದೆ ಸಾವು ಕಾಣಿಸಪ್ಪ" ಅಂತ. ಮಕ್ಕಳೆಲ್ಲಾ ದೊಡ್ಡವರಾದರು. ಚಿಕ್ಕಮ್ಮಂಗೆ ಸೊಸೆ ತರೋ ಕಾತರ. ಬಹಳ ಕಡೆ ಹುಡುಕಿ, ಕಡೆಗೆ ಮೈಸೂರಿಂದ ಹೆಣ್ಣು, ಶಾಮಣ್ಣಂಗೆ ತಂದ್ರು. ಹುಡುಗಿ ಚೆನ್ನಾಗಿದ್ಲು, ಎಸ್ಸೆಲ್ಸಿ ಪಾಸ್ ಮಾಡಿದ್ಲಂತೆ. ನಾವೆಲ್ಲಾ ಮದುವೆಗೆ ಮೈಸೂರಿಗೆ ಹೋಗಿದ್ವಿ. ನಾನಂತೂ ಆ ಮನೆ ಹಜಾರದ ಕಂಬಗಳನ್ನ ಸುತ್ತಿ ಸುತ್ತಿ ಆಮೇಲೆ ಚೆನ್ನಾಗಿ ಏಟು ತಿಂದಿದ್ದೆ.

ಸೊಸೆ ಮನೆಗೆ ಬಂದಳು. ಆರು ತಿಂಗಳಾದ ಮೇಲೆ ಸೊಸೆಗೂ ಅತ್ತೇಗೂ ಸರಿಯಿಲ್ಲ ಅನ್ನೋದು ಜಗತ್ತಿಗೆ ವಿದಿತವಾಗಿತ್ತು. ಒಂದು ಗಂಡು ಮಗೂನೂ ಆಯಿತು. ಶಾಮಣ್ಣನ ಹೆಂಡತಿ ಹೆರಿಗೆ ಆದ ಮೇಲೆ ತವರಿಂದ ಬರೋಕೆ ಒಂದು ಕಂಡೀಷನ್ ಹಾಕಿದ್ಲು. 'ಬೇರೆ ಮನೆ ಮಾಡಿ' ಅಂತ. ಶಾಮಣ್ಣ ಅದಕ್ಕೆ ಸುತರಾಂ ಒಪ್ಪಲಿಲ್ಲ. ಎಲ್ಲಾ ಆಪಾದನೇನ ಚಿಕ್ಕಮ್ಮನ ಮೇಲೂ ಹಾಕೋ ಹಾಗಿರಲಿಲ್ಲ. ಶಾಮಣ್ಣನ ಹೆಂಡತೀನೂ ಏನು ಕಮ್ಮಿ ಇರಲಿಲ್ಲ. ಮಾತು ಮಾತಿಗೆ ನಾನು ಊರಿಗೆ ಹೋಗ್ತೀನಿ ಅಂತ ನಿಂತು ಬಿಡೋಳು. ನಮ್ಮ ಅಮ್ಮ ಯಾವಾಗಲೂ ಹೇಳ್ತಿರ್ತಾರೆ. ಹೆಣ್ಣು ಮಕ್ಕಳಿಗೆ ತಂದೆ ತಾಯಿ ತುಂಬಾ ಬೆಂಬಲ ಕೊಡಬಾರದೂಂತ. ಈ ಹುಡುಗೀನಾ ತಾಯಿ - ಸೋದರಮಾವ ತುಂಬಾ ಬೆಂಬಲಿಸಿದ್ರು ಅಂತಾರೆ ನೋಡಿದವ್ರು. ಕಡೆಗೆ ಏನಾಗ್ಬೇಕೋ ಅದೇ ಆಯಿತು. ಅವಳು ಒಂದು ಸಲ ಹೋದವಳು ತಿರುಗಿ ಬರಲಿಲ್ಲ. ಕಾಗದ ಬರೆದು ಆಯಿತು. ಅದಕ್ಕೆ ಅವಳ ಸೋದರ ಮಾವ, ಹೀನಾಮಾನಾ ಒಂದು ಕಾಗದ ಬರೆದ. ಮಿಕ್ಕವರೆಲ್ಲಾ ಅವಳು ಹೋದರೆ ಒಂದು ಪೀಡೇನೇ ಹೋಯಿತು ಅಂದ್ರು. ಶಾಮಣ್ಣನ್ನ ಯಾರೂ ಕೇಳ್ಲೂ ಇಲ್ಲ, ಅವನೂ ಏನೂ ಹೇಳ್ಲೂ ಇಲ್ಲ. ಕಡೆಗೆ ಕೇಸು ಕೋರ್ಟಿಗೆ ಹೋಗಿ ಡೈವೋರ್ಸ್ ಕೂಡ ಆಗಿ ಹೋಯಿತು. ಐದು ವರ್ಷದ ಮೇಲೆ ಮಗು ತಂದೆ ಸುಪರ್ದ್‌ನಲ್ಲಿ ಇರಬೇಕು ಅಂತ ಆಯಿತು. ಯಾರು ಎಷ್ಟು ಹೇಳಿದ್ರೂ ಶಾಮಣ್ಣ ಇನ್ನೊಂದು ಮದುವೆ ಮಾಡಿಕೊಳ್ಳಲಿಲ್ಲ. ಚಿಕ್ಕಮ್ಮ ಅವರ ಪ್ರಾರ್ಥನೆಯಂತೆಯೇ ಚಿಕ್ಕಪ್ಪನಿಗಿಂತ ಮುಂಚಿತವಾಗಿಯೇ ವೈಕುಂಠ ಸೇರಿಕೊಂಡರು. ಚಿಕ್ಕಪ್ಪ ಐದು ವರ್ಷದ ಮೇಲೆ, ಮೇಲೆ ಹೋದರು.

ಕಾಲ ಏನು ಸುಮ್ಮನೆ ಕೂತಿರುತ್ಯೇ, ಒಳ್ಳೆ ಚಕ್ರ ತಿರುಗಿದ ಹಾಗೆ ತಿರುಗುತ್ತೆ. ಅದಕ್ಕೇ ಕಾಲಚಕ್ರ ಅಂತ ಅನ್ನೋದು. ಮಗು ದೊಡ್ಡದಾಗಿ ಇಂಜನಿಯರಿಂಗ್ ಪಾಸಾಗಿ ಅಪ್ಪನ ಜೊತೆ ತೋಟಗಾರಿಕೆ, ವ್ಯವಸಾಯಕ್ಕೇ ಇಳಿದ. ಚೆನ್ನಾಗಿ ಪಳಗಿದ. ಅವನಿಗೆ ಯಥಾ ಪ್ರಕಾರ ಹುಡುಗಿ ಹುಡುಕೋಕೆ ಪ್ರಾರಂಭವಾಯಿತು.

ಸಂಕ್ರಾಂತಿ ಆಗಿ ಎರಡು ದಿನ ಇರಬೇಕು, ರಾತ್ರಿ ಸಮಯದಲ್ಲಿ ನಾಯಿಗಳು ಬೊಗಳಿದ್ವು, ಆಮೇಲೆ ಯಾವುದೋ ಎತ್ತಿನಗಾಡಿ ಗಂಟೆ ಸದ್ದೂ ಕೇಳಿಸ್ತು. ಬಹಳ ಹೊತ್ತಿನವರೆಗೆ ನಾಯಿ ಬೊಗಳ್ತಾನೇ ಇತ್ತೂಂತ, ಮಗ ಬಾಗಿಲು ತೆಗೆದು ದೀಪ ಹಾಕಿ ನೋಡಿದ, ಎದುರಿಗೆ ದಾರೀಲಿ ಯಾರೋ ಬಿದ್ದಿರೋ ಹಾಗೆ ಕಾಣಿಸ್ತು. ಬೇಗ ಶಾಮಣ್ಣ, ಹಾಗೇ ರಾಮಣ್ಣನ್ನೂ ಎಬ್ಬಿಸ್ದ. ಯಾರೋ ಹೆಂಗಸು ಬಿದ್ದಿದ್ದಾಳೇಂತ ಗೊತ್ತಾಯಿತು. "ಯಾರೋ ಏನೋ, ಯಾರೂ ಎತ್ತೋಕೆ ಹೋಗ್ಬೇಡಿ, ಪೋಲಿಸ್ನೋರಿಗೆ ಹೇಳಿ ಕಳಿಸೋಣ" ಎಂದ ರಾಮಣ್ಣ.

ಬೆಳಕು ಹರಿದ ಮೇಲೆ ಗೊತ್ತಾಯ್ತು, ವಯಸ್ಸಾದ ಹೆಂಗಸು ಶಾಮಣ್ಣನ ಹಿಂದಿನ ಹೆಂಡತಿ ಅಂತ. ಸೋದರ ಮಾವ, ತಾಯಿ ತೀರಿಕೊಂಡ ಮೇಲೆ, ಸೋದರ ಮಾವನ ಮಕ್ಕಳು, ಕಾಯಿಲೆಯಾಗಿರೋ ಇವಳನ್ನ ಹೊಡೆದೂ ಬಡಿದೂ ಹೊರಗೆ ಹಾಕಿದ್ರಿಂದ, ಯಾರೋ ರೈತ ಮೈಸೂರಿಗೆ ಸಂತೆಗೆ ಹೋದವ್ನು ಗಾಡೀಲಿ ಇಲ್ಲಿಗೆ ತಂದು ಹಾಕಿ ಮುಂದೆ ಹೋಗಿದ್ದ ಅಂತ. ಮನೆಯವರೆಲ್ಲಾ "ಅವಳಿಗೂ ನಮಗೂ ಏನು ಸಂಬಂಧ. ಡೈವೋರ್ಸ್ ಆದ ಮೇಲೆ ಎಲ್ಲಾ ಮುಗಿದ ಹಾಗೆಯೇ", ಅಂತ ಕೂಗಾಡಿದ್ರು. ಶಾಮಣ್ಣ ಏನೂ ಮಾತಾಡಲಿಲ್ಲ. ಅವಳನ್ನ ಹಾಸನದ ಆಸ್ಪತ್ರೆಗೆ ಸೇರಿಸಿ ಮೂರು ತಿಂಗಳು ಉಪಚಾರ ಮಾಡಿದ. ವಾಸಿಯಾದ ಮೇಲೆ, ಊರಲ್ಲಿ ಬೇರೆ ಒಂದು ಮನೆ ಮಾಡಿ ಅವಳನ್ನ ಅಲ್ಲಿಟ್ಟು, ಜೊತೆಗೆ ಒಬ್ಬಳು ಕೆಲಸದವಳನ್ನ ಇಟ್ಟ. ಆದರೆ ತಾನು ಮಾತ್ರ ಮನೇಲೇ ನಿಂತ. ಅವನು ಅವಳನ್ನ ದಿನಾ ನೋಡೋಕೆ ಹೋಗ್ತಿರಲಿಲ್ಲ. ಅವಳು ಇನ್ನು ಬಹಳ ದಿನ ಉಳಿಯೊಲ್ಲ ಅನ್ನೋದು ಅವನಿಗೆ ಗೊತ್ತಿತ್ತು. ಇಷ್ಟಾದ್ರೂ ತಾಯಿ ನೋಡೋಕೆ ಅವನ ಮಗ ಒಂದು ದಿನ ಹೋಗಲಿಲ್ಲ. ನಮ್ಮಮ್ಮ ಶಾಮಣ್ಣ ಬೆಂಗಳೂರಿಗೆ ಬಂದಾಗ ಕೇಳಿದ್ರು "ಡೈವೋರ್ಸ್ ಆದ ಮೇಲೆ ಅವಳು ನಿನ್ನ ಹೊಣೆ ಹೇಗಾದ್ಲೋ ಶಾಮಣ್ಣ" ಅಂತ "ಅಗ್ನಿ ಸಾಕ್ಷಿಯಾಗಿ ಆದ ಮದುವೇನ. ಕೋರ್ಟಿನ ಆರ್ಡರ್ ಕರಗಿಸೋಕೆ ಆಗೋತ್ಯೇ" ಅಂದ.

ಆಕೆ ಇನ್ನು ಒಂದೂವರೆ ವರ್ಷ ಬದುಕಿದ್ಲು. ಆಕೆ ಶಾಮಣ್ಣನ ಹತ್ತಿರವೂ ಮಾತಾಡ್ತಿರಲಿಲ್ಲ, ಏನೂ ಬೇಕೂಂತ ಕೇಳ್ತಾನೂ ಇರ್ಲಿಲ್ಲ. ರಾತ್ರಿ ಒಂದು ಗಂಟೆ ಸಮಯದಲ್ಲಿ ಕೆಲಸದವಳು ಓಡಿ ಬಂದಳು, ಅಮ್ಮಾವ್ರಿಗೆ ಉಸಿರು ಎಳೀತಾ ಐತೇಂತ ಅಂತ. ಶಾಮಣ್ಣ ಒಬ್ಬನೇ ಹೋದ, ಅವಳು ಕಡೇ ಉಸಿರು ಎಳೆಯೋ ತನಕ ಪಕ್ಕದಲ್ಲೇ ಇದ್ದ. ಮಾರನೆಯ ದಿನ ಅವನೇ ಕರ್ಮ ಎಲ್ಲಾ ಮಾಡಿ ಮುಗಿಸ್ದ, ಮಗನ್ನ ಕರೆಯೋಕೂ ಹೋಗ್ಲಿಲ್ಲ. "ಅವರವರು ಹಾಕ್ಕೊಂಡ ಚೌಕಟ್ಟು ಅವರವರಿಗೆ. ಸಂಬಂಧ ಅಂದ್ಕೊಂಡವ್ರಿಗೆ ಇರುತ್ತೆ, ಇಲ್ದೇ ಇದ್ದವ್ರಿಗೆ ಇಲ್ಲ" ಅಂತಂದ್ನಂತೆ.

●

# ಸ್ವಾತಂತ್ರ್ಯದ ಸ್ವರ್ಣೋತ್ಸವ ಒಂದು ನೋಟ

● ವಾಸುದೇವ ಕಾಣೆಮಾರ್

ವಿಶ್ವದ ಇತಿಹಾಸದಲ್ಲೇ ಅತಿ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿರುವುದುದೆಂಬ ದಾಖಲೆ ಮಾಡಿದ ಬ್ರಿಟನ್ನಿನಿಂದ ಅತ್ಯಂತ ಪ್ರಾಚೀನವಾದ ಧರ್ಮ, ಸಂಸ್ಕೃತಿ, ಭಾಷೆ ಮತ್ತು ಜಿಜ್ಞಾಸೆಗಳ ಪರಂಪರೆಯಿಂದ ಸಮೃದ್ಧವಾದ ಭಾರತವು ಸುಮಾರು ನೂರೈವತ್ತು ವರುಷಗಳಷ್ಟು ಕಾಲದ ರಾಜಕೀಯ ದಾಸ್ಯದಿಂದ ವಿಮೋಚನೆಗೊಂಡು ಸ್ವತಂತ್ರವಾದದ್ದು ಈಗ ಹಳೆಯ ಮಾತಾಯಿತು. ಅರ್ಧ ಶತಮಾನವೇ ಕಳೆದುಹೋಗಿದೆ, ಎಂದರೆ ಸ್ವಾತಂತ್ರ್ಯದ ಶಕ ೧೯೪೭ರ ನಂತರ ಎರಡು ತಲೆಮಾರುಗಳು ಆಗಿಹೋಗಿವೆ.

ಕಳೆದ ಐದು ದಶಕಗಳಲ್ಲಿ ಭಾರತದಲ್ಲಿ ಏನೆಲ್ಲ ಒಳ್ಳಿತು ಸಂಭವಿಸಿದೆ ಎಂಬುದನ್ನು ನೆನಪಿಸಿಕೊಂಡು ಅಭಿಮಾನದ ವಿಷಯಗಳಿಗಾಗಿ ಸಂಭ್ರಮದ ಸಾರ್ವಜನಿಕ ಉತ್ಸವ ನಡೆಸಿ ನಮಗೆ ದೊರೆತ ಮಹಿಮಾಯುತ ಭಾವ ಸ್ವಾತಂತ್ರ್ಯವನ್ನು ಸ್ಮರಿಸತಕ್ಕ ಈ ಸುದಿನಕ್ಕಾಗಿ ನಾವು ಆನಂದ ಪಡಬೇಕಾಗಿದೆ. ಇದು ವರ್ಣರಂಜಿತ ಸುವರ್ಣೋತ್ಸವ. ಈ ಕಾಲವು ಭಾರತಕ್ಕೆ ಸ್ವರ್ಣಯುಗವಲ್ಲದಿರಬಹುದು; ಕನಕಾಭಿಷೇಕ ಮಾಡುವುದಿರಲಿ, ಕನಕವನ್ನು ಸ್ವಲ್ಪವಾದರೂ ನಮ್ಮ ರಾಷ್ಟ್ರ ಬಂಧುಗಳಲ್ಲಿ ಹಂಚಿಕೊಳ್ಳುವುದೂ ಕನಸಿನ ಮಾತಾಗಿರಬಹುದು. ಆದರೆ ನಮ್ಮ ಮಾತು. ಮನಸ್ಸು ಹೊಳೆವ ಚಿನ್ನದಂತಾಗಲಿ ಎಂದು ಹಾರೈಸುವುದು ಮತ್ತು ಅದಕ್ಕಾಗಿ ಪ್ರಯತ್ನಶೀಲರಾಗಬೇಕಾದುದು ತಪ್ಪಾಗದು. ಇದು ಹೊನ್ನಿನ ಗಳಿಗೆ ಅಥವಾ ಅಮೂಲ್ಯವಾದ ಅವಿಸ್ಮರಣೀಯ ಕಾಲ ಸಂಧಿ. ಬೇಕೆಂದಾಗ ಇಂತಹ ಒಳ್ಳೆಯ ಅವಕಾಶ ಮತ್ತೆ ಸಿಗಲಾರದು.

೧೯೪೭ರ ಮೊದಲು ಭಾರತವು ಆಹಾರ ಧಾನ್ಯಗಳ ಮತ್ತನೇಕ ವಿಷಯದಲ್ಲಿ ಸ್ವಾವಲಂಬನೆ ಪಡೆದಿರಲಿಲ್ಲ. ಬರ್ಮಾ, ಕೆನಡಾ ಮುಂತಾದೆಡೆಗಳಿಂದ ಇಲ್ಲಿಗೆ ಅನ್ನವು ಆಮದಾಗಬೇಕಿತ್ತು. ಹೀಗೆ ಅರುವತ್ತರ ದಶಕದ ಅಂತ್ಯದ ವರೆಗೂ ಅನಾವೃಷ್ಟಿ, ಅತಿವೃಷ್ಟಿಯಿಂದಾಗಿ ಈ ಪರಿಸ್ಥಿತಿಯಿತ್ತು. ಇದಕ್ಕೆ ಕಾರಣವು ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿದ್ದ ನಮ್ಮ ಬೇಸಾಯಕ್ರಮ. ನೀರಾವರಿಯ ಬೃಹತ್ ಯೋಜನೆಗಳು, ಗೊಬ್ಬರ, ಬೀಜಗಳು ಮತ್ತು ವೈಜ್ಞಾನಿಕ ಕುಶಲತೆಯು ಸೇರಿದಾಗ ಆತ್ಮ ನಿರ್ಭರತೆ ಒದಗಿ ಬಂತು. ಹಸಿರು ಕ್ರಾಂತಿ, ಹಾಲು ಉತ್ಪಾದನೆಯಲ್ಲಿ ಹೆಚ್ಚಳ, ಪ್ರಾಥಮಿಕ ಆರೋಗ್ಯದಾನ, ಕೆಲಸಕ್ಕೆ ಅವಕಾಶ ಇವುಗಳಿಂದಾಗಿ ನಮ್ಮ ಜನರಲ್ಲಿ ಸಂಪನ್ನತೆ ಮಾಡಿದೆ. ಸ್ವಲ್ಪ ಹೆಚ್ಚಿಗೆ ಹಣ ತೆರುವಂತಾದರೂ ಸಾರ್ವಜನಿಕರಿಗೆ ಆವಶ್ಯಕ ವಸ್ತುಗಳ ವಿತರಣೆಯಾಗಿದೆ. ಜನರು ಹೊಸ ಉದ್ಯೋಗಗಳಲ್ಲಿ ಮನಸ್ಸು ಹಾಕಲು ಯತ್ನಿಸಿದ್ದಾರೆ ಮತ್ತು ಅವರ ಉಡುಗೆ, ನಿವಾಸ, ವಿದ್ಯೆ ಮತ್ತು ಕಾರುಬಾರುಗಳ ಅಂತಸ್ತು ಸಾಮಾನ್ಯವಾಗಿ ಸುಧಾರಿಸಿದ್ದು ಕಂಡುಬರುತ್ತದೆ. ಜನರ ಆಯುರ್ವೃದ್ಧಿಯಾಗಿದೆ ಎಂಬ ಒಂದು ಸಾಕ್ಷಿಯೇ ಸಾಕು. ಆ ಐವತ್ತು ವರುಷಗಳಲ್ಲಿ ಕಂಡುಬರುವ ಜನಪ್ರಗತಿಗೆ. ಕೆಲವು ದೊಡ್ಡ ಉದ್ಯಮಿಗಳು ಹಣವಂತರಾಗಿ ದುಂದುವೆಚ್ಚ ಮಾಡಲು ಹೋಗಿ, ಬಡಜನರು ಸರಿಯಾದ ಅವಕಾಶ ಸಿಗದೆ ಇನ್ನಷ್ಟು ಬಡತನಕ್ಕಿಳಿದು ಹೋದದ್ದು ನಿಜವಾದರೂ. ಮಧ್ಯಮವರ್ಗವೊಂದು ನಮ್ಮ ಸಮಾಜದಲ್ಲಿ ವಿಸ್ತಾರಗೊಂಡು ಅದು ವ್ಯವಹಾರ ಕುಶಲವಾಗಿ ಗ್ರಾಹಕತೆಯನ್ನು ಬೆಳೆಸಿರುವುದೂ ಕಂಡು ಬರುತ್ತದೆ.

ನಮ್ಮ ರಾಷ್ಟ್ರವು ಎಷ್ಟೋ ಸಾವಿರ ವರುಷಗಳ ಅನುಭವವುಳಿಸಿಕೊಂಡಿರುವುದಾದರೂ ಬ್ರಿಟಿಷರು ಭಾರತವನ್ನು ನಮಗಾಗಿ ಬಿಟ್ಟು ಹೊರಟುಹೋದ ನಂತರದ ಅನುಭವವೇ ನಮಗಿಂದು ಮುಖ್ಯವಾಗಿದೆ. ಇಂದಿಗೆ ನಮಗೆ ಏರುವ ಜೀವನ ಮಟ್ಟಕ್ಕೆ ಹೇಗೆ ಹೊಂದಿಕೊಳ್ಳುವುದು ಮತ್ತು ನಮ್ಮ ಮಾಧ್ಯಮವರ್ಗದ ಮೌಲ್ಯಗಳಿಗೆ ಮತ್ತು ಮಾನವಸಾಮಾನ್ಯ ಸಂಸ್ಕೃತಿಗೆ ಸರಿಯಾಗಿ ಹೇಗೆ ನಡೆದುಕೊಳ್ಳುವುದೆಂಬ ಸಮಸ್ಯೆಗಳಿವೆಯೇನೋ ಹೌದು. ಆದರೆ ಜಾಗತಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ನಮ್ಮ ಸಮಸ್ಯೆಗಳ ಭಾರ ಯಾವ ಪ್ರಮಾಣದಲ್ಲಿದೆ ಎಂಬುದನ್ನು ಮೊದಲಾಗಿ ಅರಿತುಕೊಳ್ಳಬೇಕಾಗಿದೆ. ನಮ್ಮ ಸಮಸ್ಯೆಗಳನ್ನು ಹಾಗೆಂದು ಲಘುವಾಗಿ ಪರಿಗಣಿಸಬೇಕಾಗಿಲ್ಲ, ಅಥವಾ ಘೋರವೆಂದು ಭಾವಿಸುವುದು ಬೇಡ.

ತೊಂಬತ್ತರ ದಶಕದಲ್ಲಿ ಪ್ರಬಲವಾಗಿರುವ ಸೆಳೆತಗಳಲ್ಲಿ ಜಗತ್ತಿನೆಲ್ಲೆಡೆ ಮುಕ್ತವಾದ ಮಾರುಕಟ್ಟೆ ಬೇಕಿದೆಯೆಂಬ ಆಶಯವೊಂದು (Globalisation) ಅದಕ್ಕೆ ವಿರುದ್ಧವಾಗಿ ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಕೆಲವು ರಾಷ್ಟ್ರಗಳು ವ್ಯಾಪಾರ ನಿರ್ಬಂಧ ವಿಧಿಗಳನ್ನು ಗುಂಪಿನಲ್ಲಿ ಸಾರಿ ಗುಂಪುಗಾರಿಕೆಯನ್ನೂ ಸ್ವಜನಪಕ್ಷಪಾತವನ್ನೂ ತೋರಿಸಿದ್ದಾದರೂ ಅವುಗಳೆಲ್ಲ ಅಂತರಾಷ್ಟ್ರೀಯ ವ್ಯವಹಾರದಲ್ಲಿ ನಡೆಯಲಿಕ್ಕಿಲ್ಲವೆಂಬುದನ್ನು ಮನಗಾಣುತ್ತಿವೆ. ಇದುವರೆಗೆ ಸಮಾಜ ಸ್ವಾಮ್ಯವಾದಿ (Communsit) ಮತ್ತು ಭಂಡವಾಳಷಾಹಿ Capitalsit) ಎಂಬ ಎರಡು ಬಣಗಳಿದ್ದುದು ಈ ದಶಕದಾರಂಭದಲ್ಲಿ ನಾಶವಾಗಿ ಎಲ್ಲರೂ ಪ್ರಜಾಪ್ರಭುತ್ವವಾದಿಗಳೇ ಆಗಿ ಬಂಡವಾಳ ಪ್ರಧಾನವಾದ ಆರ್ಥಿಕ ವ್ಯವಸ್ಥೆಯಿಂದಲೇ ತಮಗೆ ಉದ್ಧಾರವೆಂದೀಗ ತಿಳಿದಿದ್ದಾರೆ. ಇದರ ಪರಿಣಾಮವೇ ಅನಿರ್ಬಂಧಿತ ಮಾರುಕಟ್ಟೆ (Free Market) ತತ್ಪರಿಣಾಮವಾಗಿ ಕೊರಿಯಾ, ಜಪಾನು, ಟೈವಾನು, ಸಿಂಗಾಪುರ, ಮಲೇಶಿಯಗಳಂತಹ ಪೂರ್ವ ಏಶ್ಯಾದ ರಾಜ್ಯಗಳು ತಮ್ಮ ಆರ್ಥಿಕ ಬಲ ಬೆಳೆಸಿಕೊಂಡಾಗಿದೆ. ಯಾರು ಗ್ರಾಹಕರ ಆವಶ್ಯಕತೆಯನ್ನು ಪೂರೈಸಲು ಶ್ರಮದ ಉದ್ಯೋಗ ಮತ್ತು ಅಂತರಾಷ್ಟ್ರೀಯ ವ್ಯಾಪಾರಗಳಲ್ಲಿ ತೊಡಗುತ್ತಾರೂ ಅವರಿಗೇ ಎಲ್ಲಾ ಅಭಿವೃದ್ಧಿಯೆಂಬುದು ಈಗ ಸ್ಪಷ್ಟವಾಗಿದೆ. ಭಾರತವು ಜೀವನ ಪ್ರಗತಿ ಸಾಧಿಸಬೇಕಾದರೆ ಇದೇ ದಾರಿಯನ್ನು ತುಳಿಯಬೇಕಿದೆ. ಅದಕ್ಕೆ ಹೆಚ್ಚಿಗೆ ಪ್ರಯತ್ನಿಸೋಣ.

೧೯೪೫ರಲ್ಲಿ ಜಾಗತಿಕ ಯುದ್ಧ ನಿಂತಮೇಲೆ ಅಲ್ಲಲ್ಲಿ ಸ್ಥಳೀಯ ಕಾದಾಟಗಳು ವಿಶ್ವದಲ್ಲಿ ಆದರೂ ಒಟ್ಟಿನಲ್ಲಿ ಶಾಂತಿ ಪೂರ್ಣವಾಗಿದೆ. ರಶ್ಯಾದೇಶವು ತನ್ನ ರಕ್ಷಣೆಗಾಗಿ ಖರ್ಚು ಮಾಡುವುದನ್ನು ಕಡಿಮೆಮಾಡಿಕೊಂಡ ಮೇಲೆ (೧೯೯೦) ಅದೇ ಜಾಡಿನಲ್ಲಿ ಜಗತ್ತಿನ ಎಲ್ಲ ದೇಶಗಳು ಸೈನ್ಯಕ್ಕಾಗಿ ಖರ್ಚುಮಾಡುವುದನ್ನು ಹಿಂದಿನದಕ್ಕಿಂತ ಸ್ವಲ್ಪ ಕಡಿಮೆ ಮಾಡಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚಿಗೆ ವ್ಯಯಮಾಡುತ್ತಿವೆ. ಇದರಿಂದ ಜಗತ್ತಿನಲ್ಲಿ ಎಲ್ಲಾ ದೇಶಗಳ ಮಧ್ಯಮವರ್ಗದವರಲ್ಲಿ ಒಂದು ರೀತಿಯ ಸವರ್ಣತೆ ಬಂದಿರುವುದು ಶಾಂತಿಕಾಲದ ಒಂದು ಪರಿಣಾಮವಾಗಿ ಮಧ್ಯಮ ವರ್ಗದವರ ಸಮಸ್ಯೆಯ ಆರ್ಥಿಕ ಸ್ವಾವಲಂಬನದ ಉದ್ದೇಶದ್ದೇ ಆಗಿದೆ. ಹೀಗಾಗಿ ಜಗತ್ತಿನ ಆಶೋತ್ತರವು ಇದು ಒಂದೇ ಎಂಬುದು ಈಗ ಕಂಡು ಬರುತ್ತದೆ.

ಇಪ್ಪತ್ತನೆ ಶತಮಾನದ ಆರಂಭದಲ್ಲಿ ಎಷ್ಟೋ ದಾರ್ಶನಿಕರು ಹೊಸ ಭೌತಿಕ ವಿಜ್ಞಾನದ ಸಂಶೋಧನೆಗಳಿಂದ ಮಾನವ ಜೀವನಕ್ಕೆ ಸೌಲಭ್ಯ

ಒದಗುತ್ತದೆ, ರೋಗಗಳ ಮತ್ತು ಬಡತನಗಳ ನಿವಾರಣೆಯಾಗುತ್ತದೆಂದು ಆಶಾಪರರಾದುದು ಕಾಲ ಕಳೆದಂತೆ ಸುಳ್ಳಾಗಿ ಪರಿಣಮಿಸಿದೆ. ಎಲ್ಲಾ ಸೌಲಭ್ಯಗಳ ಅವಕಾಶವನ್ನು ನಮ್ಮೊಳಗಿನ ಸ್ವಾರ್ಥಿಜನರು ಹಾಳುಮಾಡಿಕೊಂಡದ್ದು ಎಲ್ಲಾ ದೇಶಗಳ ಸಮಾಜಗಳಲ್ಲೂ ಕಾಣಸುತ್ತದೆ. ಒಬ್ಬರು ಇನ್ನೊಬ್ಬರನ್ನು ಶೋಷಣೆ ಮಾಡತೊಡಗಿದಾಗ ಜನಗಳೊಳಗೆ ಸಮಾನತೆ ಉಳಿದಿಲ್ಲ. ಲಂಚ, ಭ್ರಷ್ಟಾಚಾರ, ಲೈಸೆನ್ಸ್ ಗುತ್ತಿಗೆಗಳು. ಅವಶ್ಯಕ ನ್ಯಾಯಕ್ಕೆ ವಿಳಂಬ ಮತ್ತು ವ್ಯವಹಾರದಲ್ಲಿ ಕಾಪಟ್ಯಾಯಗಳು ಇವೆಲ್ಲ ಬೆಳೆದು ಅವಶ್ಯಕವಾದ ಸೇವಾ ಸೌಲಭ್ಯಗಳು ಸಮಾಜಿಕರಿಗೆ ಇಲ್ಲವಾದಂತಾದುದೂ ಉಂಟು. ಸರಕಾರಕ್ಕೆ ವಿಧೇಯವಾಗಿ ಕೈತುಂಬ ತೆರಿಗೆಕೊಟ್ಟರೂ ಜನರಿಗೆ ಕುಡಿವನೀರು ವಿದ್ಯುತ್‌ಶಕ್ತಿ, ಕೊಳಚೆ ಸಾಗಿಸುವ ಸೌಲಭ್ಯ ಮತ್ತು ಕೆಲಸಕ್ಕೆ ಬೇಕಾದ ಸಲಕರಣೆಗಳೇ ಸರಕಾರದ ಯೋಜನೆಗಳಿಂದ ಲಭಿಸುತ್ತಿಲ್ಲವೆಂಬುದು ಭಾರತದಲ್ಲಂತೂ ದುರ್ದೈವದ ಸಂಗತಿಯಾಗಿದೆ. ನಮ್ಮ ಸರಕಾರಕ್ಕೆ ಉದಾರನೀತಿ ಸಾಲದಾಗಿ ಅದು ಸಮಾಜಕ್ಕೆ ಕೆಟ್ಟ ಮಾದರಿ ಹಾಕಿದೆ.

ನಮ್ಮ ಪ್ರಜಾಪ್ರಭುತ್ವದಲ್ಲಿ ಇಂತಹ ಪರಿಸ್ಥಿತಿಗೆ ನಿವಾರಣೋಪಾಯಗಳಿಲ್ಲವೆ? ಮತಗಟ್ಟೆಗಳಲ್ಲಿ ಪ್ರಜೆಗಳು ಅಕ್ರಮ ಹಿಡಿದ ಸರಕಾರವನ್ನು ಉರುಳಿಸಬಹುದಾಗಿದೆ. ನ್ಯಾಯಾಲಯಕ್ಕೆ ಹೋಗಿ ಸಾರ್ವಜನಿಕ ವಿಷಯದಲ್ಲಿ ಸರಕಾರಕ್ಕೆ ಯೋಗ್ಯ ಆದೇಶ ಸಿಗುವಂತೆ ಮಾಡಬಹುದಾಗಿದೆ. ಪ್ರಬಲ ಅಧಿಕಾರಿಗಳ ಮುಂದೆ ಧರಣಿ ಸಂಪು ಹೂಡಿ ಕೇಳಿಕೆಗಳನ್ನು ಘೋಷಿಸಲಿಕ್ಕೂ ಪತ್ರಿಕೆಗಳ ಮುಖಾಂತರ ಜನಜಾಗ್ರತಿಮಾಡಲಿಕ್ಕೂ ಸಾಧ್ಯವಿದೆ. ಆದರೆ ಅವೆಲ್ಲವೂ ಕಷ್ಟಕರ ಮತ್ತು ಅವುಗಳಿಂದ ಪರಿಹಾರವು ನಿಧಾನವಾಗಿ ಆದೀತು. ಪರಿಹಾರವು ಎಷ್ಟೋ ವೇಳೆ ಸಿಗುವುದಿಲ್ಲ ಎಂಬುದೂ ನಮಗೀಗ ಅನುಭವದ ಮಾತು. ಇದರಿಂದ ತಿಳಿವುದೇನೆಂದರೆ ನಮ್ಮ ಪ್ರಜಾಪ್ರಭುತ್ವಕ್ಕೆ ದಿಕ್ಕು ತೋರಬೇಕಾದವರು ಇಂದಿಗೆ ಸ್ವಾರ್ಥಿಕುಶಲರಾದ ಹೊಲಸು ರಾಜಕಾಣಿಗಳಾಗಿ ಬರುವವರು ಅಲ್ಲ; ಹಾಗೆಯೇ ಶ್ರೀಮಂತರೂ ರಾಜಮನೆತನದವರೂ ಅಲ್ಲ. ಒಳ್ಳೆಯದಕ್ಕಾಗಲಿ ಕೆಟ್ಟ ಪರಿಣಾಮಕ್ಕಾಗಲಿ ಎದೆಗೊಡುವ ಸುಶೀಲರೂ ಹೃದಯವಂತರೂ ಜವಾಬ್ದಾರಿ ಹೊರಲಿಕ್ಕಾಗಿ ಮುಂದೆ ಬರಬೇಕಾಗಿದೆ. ಹಿಂದೆ ತಪ್ಪು ಮಾಡದಂತಹವರನ್ನೇ ನಾವು ಚುನಾಯಿಸಿ ಅಧಿಕಾರವಹಿಸಿಕೊಡಬೇಕಾಗುವಂತಹ ಒಂದು ಹೊಸ ರಾಜಕೀಯ ವ್ಯವಸ್ಥೆಯನ್ನು ನಮ್ಮಲ್ಲಿ ತರಬೇಕಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಪರಿಶುದ್ಧರೆನಸಿರುವವರು ಪಕ್ಷಾತೀತರು ಹತ್ತು ಮಂದಿ ಇದ್ದರೆ ದೇಶಕ್ಕೆ ದೇಶವೇ ಸುಧಾರಿಸುವುದು. ಅಂತಹವರನ್ನೇ ರಾಷ್ಟ್ರಪತಿಯನ್ನಾಗಿ, ಅಮಾತ್ಯನ್ನನ್ನಾಗಿ, ಮಹಾಸಚಿವರನ್ನಾಗಿ ದೇಶಕ್ಕೆ ದೇಶವೇ ಒಮ್ಮೆಗೇ ಚುನಾಯಿಸುವಂತೆ ನಮ್ಮ ರಾಷ್ಟ್ರ ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕಿದೆ. ಇದೀಗ ನಿಜವಾದ ಪ್ರಜಾಪ್ರಭುತ್ವವಾದೀತು.

ಜಗತ್ತಿಂದು ಐರೋಪ್ಯರು, ಇಸ್ಲಾಮ್, ಹಿಂದೂ, ಕನ್‌ಫ್ಯೂಶಿಯನ್, ಲ್ಯಾಟಿನ್ ಅಮೆರಿಕನ್, ಆಫ್ರಿಕನ್, ಸ್ಲಾವಿಕ್ ಎಂಬ ಮುಖ್ಯ ಬಣಗಳಲ್ಲಿ ಬಿದ್ದು ತಮ್ಮ ಬುಡಕಟ್ಟಿನ ಪರಂಪರೆಗೆ ಬದ್ಧರಾಗಿರುವುದನ್ನು ನೋಡುತ್ತಿದ್ದೇವೆ. ಇತ್ತೀಚೆಗಂತೂ ಈ ಬಣವಿರೋಧ ವ್ಯತ್ಯಾಸಗಳು ಹೆಚ್ಚಿವೆಯೆಂಬುದು ವಿಶ್ವದ ಶಾಂತಿಗೆ, ಸ್ಥಿರತೆಗೆ, ಐಕ್ಯಕ್ಕೆ ಹೊಂದಿಕೆಗೆ ಮತ್ತು ವೈಚಾರಿಕತೆಗೆ ಭಂಗಬರುವಂತಹ ಪ್ರಸಂಗಗಳನ್ನು ಮುಂದಾದರೂ ತಂದೊಡ್ಡಬಹುದೆಂದು ನಾವು ಜಾಗ್ರತೆವಹಿಸಬೇಕಿದೆ. ಹಾಗೆಯೇ ಸಾಮೂಹಿಕ ಜೀವನವು ಒಡೆದು ಹೋಗಿ ಸಹಕಾರದ ಅವಶ್ಯಕತೆಯಿಲ್ಲದೆ ವ್ಯಕ್ತಿಪ್ರಧಾನ ಕುಟುಂಬಗಳು ಪ್ರತ್ಯೇಕತೆ ಉಳಿಸಿಕೊಂಡು ಸಮಾಜದಿಂದ ಬೇರುಕಿತ್ತಂತೆ ಬಾಳುವುದನ್ನೂ ವಿರೋಧಿಸಬೇಕಾಗಿದೆ. ಆದರ್ಶಕ್ಕಾಗಿ ಜೀವನಧರ್ಮವು ಒಂದು ಇರಲಿ ಎಂದುಕೊಂಡು ಮಾನವ ಧರ್ಮವಿರೋಧಿಗಳನ್ನು (ಮತವಿರೋಧಿಗಳೆಂದು ಅರ್ಥವಾಗುವುದಿಲ್ಲ) ಮಟ್ಟ ಹಾಕಬೇಕಾಗಿದೆ. ಭಾಷೆ, ಮತ, ಪ್ರಾಂತ, ಕುಲ ಮೊದಲಾದವುಗಳ ಬಿಗಿತವು ಜನರ ಮೇಲಿರುವುದನ್ನು ಸಡಲಿಸಬೇಕಾಗಿದೆ.

ಜಗತ್ತಿನಲ್ಲೆಲ್ಲಾ ನಡೆಯುವ ಇಂತಹ ದುರ್ವ್ಯವಹಾರಗಳಿಂದ ಭಾರತವು ತಪ್ಪಿಸಿಕೊಂಡದ್ದಾದರೆ ಭಾರತಕ್ಕೆ ಉತ್ತಮ ಭವಿಷ್ಯವಿದೆ. ನಮಗೆ ಶೀಘ್ರವೇ ಬಡತನ ನಿರ್ಮೂಲಗೊಳಿಸಲು ಮತ್ತು ಈ ಸ್ಪರ್ಧಾತ್ಮಕ ಜಗತ್ತಿನ ವ್ಯವಹಾರದಲ್ಲಿ ತೀವ್ರ ವೇಗ ಗಳಿಸಲು ಸಾಧ್ಯವಾಗುವ ಸಾಧ್ಯತೆಯು ಖಂಡಿತವಾಗಿಯೂ ಇದೆ. ನಾವು ನಿರಾಶೆಯಿಂದ ಮುಂದುವರಿಯದೆ ಮೇಲೆಂದ ವಿಷಯಗಳ ಉಪಯುಕ್ತ ಜ್ಞಾನವನ್ನು ಅನುಷ್ಠಾನದಲ್ಲಿ (ಆಚರಣೆಯಲ್ಲಿ) ತಂದುಕೊಂಡರೆ ನಮ್ಮ ಭವಿಷ್ಯವು ಸುಖಮಯವಾಗುವುದು.

ಬರೇ ರಾಷ್ಟ್ರಪರ ಘೋಷಣೆ ಹಾಕಿದರೆ, ಸಿಹಿತಿಂಡಿ ಹಂಚಿದರೆ, ಕಾಗದದ ಚಿಕ್ಕ ಚಿಕ್ಕ ತ್ರಿವರ್ಣ ಧ್ವಜಗಳಿಂದ ಮನೆಗಳನ್ನು ಸಿಂಗರಿಸಿದರೆ ಸ್ವಾತಂತ್ರ್ಯ ದಿನಾಚರಣೆಯಾಗುವುದಿಲ್ಲ. ನಾವು ಸರಿಯಾದ ಮಾರ್ಗದಲ್ಲೇ ಇದ್ದೇವೆಂದೂ ಸ್ವಲ್ಪ ತಪ್ಪಿದ ದಾರಿ ಸರಿಪಡಿಸಿಕೊಂಡರೆ ಎಲ್ಲವೂ ಸರಿಹೋಗುತ್ತದೆಂದೂ ವಿಶ್ವಾಸದಲ್ಲಿದ್ದರೆ ಅದಕ್ಕಿಂತ ಬೇರೆ ರೀತಿಯಲ್ಲಿ ಸುವರ್ಣ ಮಹೋತ್ಸವದ ಸ್ವಾತಂತ್ರ್ಯ ದಿನಾಚರಣೆ ಮಾಡುವುದು ಬೇಡ. ಈ ಸಂದರ್ಭದಲ್ಲಿ ಸಲ್ಲದ ಗೋಳಾಟ ಕೇಳಿಸಬಾರದು.

●

## ಉಷಾ ಜೈರಾಮ್ ಸ್ಮಾರಕ ಶಿಷ್ಯವೃತ್ತಿ

ಮೈಸೂರು ಅಸೋಸಿಯೇಷನ್‌ನ ಆಜೀವ ಸದಸ್ಯರಾಗಿದ್ದು, ಪ್ರತಿಯೊಂದು ಕಾರ್ಯ ಕಲಾಪದಲ್ಲೂ ಪೂರ್ಣರೀತಿಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಅಸೋಸಿಯೇಶನ್ನಿನ ಒಂದು ಅವಿಭಾಜ್ಯ ಅಂಗವೇ ಆಗಿ ಹೋಗಿದ್ದ ಶ್ರೀಮತಿ ಉಷಾ ಜೈರಾಮ್ ಅವರ ನಿಧನ ಅಸೋಸಿಯೇಶನ್ನಿಗೆ ಎಂದೂ ತುಂಬಲಾಗದ ನಷ್ಟ. ಅವರು ಅಸೋಸಿಯೇಶನ್ನಿಗೆ ಸಲ್ಲಿಸಿರುವ ಸೇವೆಯನ್ನು ನೆನಪಿನಲ್ಲಿಟ್ಟುಕೊಂಡು ಅವರ ಸ್ಮರಣಾರ್ಥವಾಗಿ ಒಂದು ಶಿಷ್ಯವೃತ್ತಿಯನ್ನು ಈ ವರ್ಷದಿಂದಲೇ ಅನುಷ್ಠಾನಕ್ಕೆ ತರಲಾಗಿದೆ.

ಶ್ರೀಮತಿ ಉಷಾ ಜೈರಾಮ್ ಅತ್ಯಂತ ಪ್ರೀತಿಯಿಂದ ಆರಂಭಿಸಿ ಬೆಳೆಸಿದ್ದ 'ಬೀದಿ ಮಕ್ಕಳ' ಉದ್ಧಾರಕ್ಕಾಗಿ ನಡೆಸುತ್ತಿದ್ದ 'ಶ್ರದ್ಧಾ' ಕಾರ್ಯಕ್ರಮಕ್ಕೆ ಚೇತನ ಹಾಗೂ ಸಹಾಯ ನೀಡುವ ಸಲುವಾಗಿ ಪ್ರತಿ ವರ್ಷ ರೂ. 5000/- ಗಳನ್ನು "ಮೈಸೂರು ಅಸೋಸಿಯೇಶನ್ನಿನ ಉಷಾ ಜೈರಾಮ್ ಸ್ಮಾರಕ ಶಿಷ್ಯವೃತ್ತಿ" ಎಂಬ ಶೀರ್ಷಿಕೆಯಡಿ ಅಖಿಲ ಭಾರತ ಮಹಿಳಾ ಸಭೆಗೆ ಕೊಡಲಾಗಿದೆ. ಈ ಶಿಷ್ಯವೃತ್ತಿಯ ಮುಖ್ಯ ಉದ್ದೇಶವು ಈ 'ಬೀದಿ ಮಕ್ಕಳ' ವಿದ್ಯಾಭ್ಯಾಸಕ್ಕೆ ಒತ್ತುಕೊಡುವ ಸಲುವಾಗಿ ಪುಸ್ತಕಗಳು, ಪಾಠದ ಫೀಸು, ಶಾಲಾ ದಿರಿಸುಗಳು ಹಾಗೂ ಇತರ ಅಭ್ಯಾಸಕ್ರಮಕ್ಕೆ ಬೇಕಾಗುವ ಸಲಕರಣೆಗಳಿಗಾಗಿ ಉಪಯೋಗವಾಗುವುದು. ಈ ರೀತಿ ಉಪಯೋಗವಾದ ದತ್ತಿಯ ಹಣದ ತಪಶೀಲನ್ನು ಅ.ಭಾ.ಮ.ಸ.ಯು. ಅಸೋಸಿಯೇಶನ್ನಿಗೆ ಪ್ರತಿವರ್ಷವೂ ಕಳಿಸಿಕೊಡತಕ್ಕದೆಂದು ಕೋರಲಾಗಿದೆ.

# ಮಹಿಳಾ ಮಂಡಳದ ಪಿಕ್‌ನಿಕ್

● ಸುಮಾ ದ್ವಾರಕನಾಥ್

ಮಹಿಳೆಯರ ಮೀಟಿಂಗ್ ಭರದಿಂದ ಸಾಗಿತ್ತು. ಈ ಸಲ ದೂರದ picnic ಒಂದಿನ stay ಇರೋ ಹಾಗೆ ಹಾಕೋಣಾರೀ

"ಖಂಡಿತ ಆಗೊಲ್ಲಪ್ಪ, ಮನೇಲಿ ಮಕ್ಕಳು ಗಂಡ ಒಪ್ಪೊಲ್ಲ"

ಪ್ರತೀ ಸಲ ಹೀಗೇ ಆಗುತ್ತೆ ಬರೋದು ಬರಲಿ.

"ಎಷ್ಟು ಜನಾ ಆದ್ರೂ ಪರವಾಗಿಲ್ಲ ಹೊರಟು ಬಿಡೋಣ"

(Seat ತುಂಬಲು ಪ್ರತಿ ವರ್ಷ ಪ್ರಯತ್ನ ಪಡುತ್ತಿದ್ದ ಮಹಿಳೆಯ ಉವಾಚ)

ಸರಿ ಹಾಗಾದ್ರೆ ಹರಿಹರೇಶ್ವರದ ತನಕ ಹೋಗಿ ಬರೋಣ.

ಹರಿಹರೇಶ್ವರ, ಮರುಡ್ ಜಂಜೀರಾ ಗೆ ಹೋಗೋದಾದ್ರೆ ಬಸ್, ಊಟದ ವ್ಯವಸ್ಥೆ ನಾನು ನೋಡ್ತೀನಿ ಅಂದ್ಳು ಕಾರ್ಯದರ್ಶಿ

2-3 ಕಡೆ ವಿಚಾರಿಸಿ ಅವಳ ಪರಿಚಯವಿರುವ ಒಬ್ಬ agent ಹತ್ರ ಮಾತಾಡಿದ್ಲಾಯ್ತು. ಮೊದ್ಲು ರೂ. 6000/- ಕ್ಕೆ ಹೂ ಅಂದಿದ್ದವನು late ಆಗಿ ಬಂದ್ರಿ ಅಂತ ದುಡ್ಡು ಜಾಸ್ತಿ ಮಾಡಿದ. 30 ಜನದ ಬಸ್ ಗೊತ್ತು ಮಾಡಿ members book ಮಾಡಲು ಶುರು ಮಾಡಿದ್ಲಾಯ್ತು.

ಪ್ರತಿಯೊಬ್ರ ಮನೆಗೆ message ಕಳಿಸಿದ್ರೂ ಯಥಾ ಪ್ರಕಾರ 7-8 booking ನಲ್ಲೇ ನಿಂತುಬಿಡ್ತು. ಸೀಟ್ ತುಂಬದಿದ್ರೆ ನಷ್ಟವಾಗುತ್ತಲ್ಲ ಅನ್ನೋ ಯೋಚನೇಲಿರೋವಾಗಲೇ, ತಮ್ಮ ಮಕ್ಕಳನ್ನು ತೊಡೇ ಮೇಲೆ ಕೂಡಿಸಿಕೊಳ್ಳಲ್ಲ, ಬೇರೆ seat ಕೊಡಬೇಕು ಅನ್ನೋ members Extra seat ಕೇಳಲು ಶುರು ಮಾಡಿದರು.

Picinic ದಿನವಂತೂ ಸುಮಾರು 10-15 ಸೀಟುಗಳನ್ನು ಹೇಗೆ adjust ಮಾಡೋದಪ್ಪಾ ಅನೋ ತಲೆ ನೋವು ಶುರುವಾಯ್ತು. ವ್ಯವಹಾರ ಜ್ಞಾನವಿಲ್ಲದಿದ್ದ Tourist assistant ಹಿಂದಿನ ದಿನವೇ ಹೇಳಿದ್ದ. ಆ 30 ಜನರ ಬಸ್ condition ಸುಮಾರು, Driver ಸಹ Auto ಓಡಿಸುತ್ತಿದ್ದವನು ಅಂತ ಹೇಳಿಬಿಟ್ಟಿದ್ದ. ನಮಗೆಲ್ಲರಿಗೂ ಈ ಸಲ picnicಗೋ? accident ಗೋ ಹೋಗ್ತಿರೋದು ಅನ್ನೋ ಸಂದೇಹನೂ ಶುರುವಾಗಿತ್ತು.

ಬೆಳಗ್ಗೆ 6½ಯಿಂದಲೇ ಜಮಾಯಿಸಿದ್ದ ಮಹಿಳಾ ಮೆಂಬರುಗಳ family 8ಗಂಟೆ ಹೊತ್ತಿಗೆ restless ಆಗೋಕೆ ಶುರುವಾಯ್ತು. ಎದುರುಗಡೆ hotelನಲ್ಲಿ ಚಾ ತರಿಸಿ ಕುಡಿದಿದ್ದೂ ಆಯ್ತು.

ಅಷ್ಟು ಹೊತ್ತಿಗೆ 60 ಜನರ posh bus ನಮ್ಮ ಮುಂದೆ ಬಂದು ನಿಂತಾಗ ನಮ್ಮೆಲ್ಲರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. Any how good beginning ಅಂದ್ಕೊಂಡು ಮಕ್ಕಳು ಮರಿ ಆದಿಯಾಗಿ ಎಲ್ಲರಿಗೂ ಧಾರಾಳವಾಗಿ ಸೀಟ್ ಕೊಟ್ಟಾಯ್ತು. ಜಯಕಾರದೊಂದಿಗೆ, ಬಸ್‌ಗೆ ಪೂಜೆ ಮಾಡಿ ಹೊರಟಿದ್ದಾಯ್ತು. ಎಲ್ಲ picnicಗಳ ಶುರುವಾತಿನಂತೆ ಗಣಪತಿ ಭಜನೆಯಿಂದ ಆರಂಭಮಾಡಿ, ಅಂತಾಕ್ಷರಿಗೆ ಮುಂದುವರೆಯುವ ಹೊತ್ತಿಗೆ 'ಮಡ್' ಗಣಪತಿಯ ದರ್ಶನಕ್ಕಾಗಿ break ಕೊಡಬೇಕಾಯಿತು. ಗಣಪತಿದರ್ಶನ ಯಾಂತ್ರಿಕವಾಗಿ ಮಾಡಿ ಬಂದ ಮೇಲೆ ದೇವಾಲಯದ ಹಿಂದಿರುವ ದೃಶ್ಯ ಎಲ್ಲರನ್ನು ಮೂಕವಾಗಿಸಿತು. ಬಲಬದಿಯಲ್ಲಿ ಕೋಚು ಕೋಚಾಗಿ ನಿಂತಿರುವ ಎತ್ತರದ ಕೋಡುಗಲ್ಲುಗಳು. ಸ್ವಚ್ಛ ನೀಲಾಕಾಶ, ಬೆಟ್ಟಗಳನ್ನು ಪ್ರತಿ ಬಿಂಬಿಸುತ್ತಿರುವ ಪುಟ್ಟ ಕೊಳ. ಪ್ರಕೃತಿಯನ್ನು ಸವಿಯುವ ಆ ಒಂದು ಕ್ಷಣ ದೀರ್ಘವಾಗಲು ಬಿಡದಂತೆ ಮತ್ತೆ ಬಸ್ಸಿನ ಕಡೆ ಓಟ. ಅಲ್ಲಿ ತಿಂಡಿ, ಕಾಫಿ ಮುಗಿಸಿ ಮತ್ತೆ ಪಯಣ. Youngsters ... Vs.... ಮಹಿಳೆಯರು, ಆದ್ರಿಂದ ಎಲ್ಲಾ ಭಾಷೆಯ ಹಾಡುಗಳೂ ಅಂತಾಕ್ಷರಿಯಲ್ಲಿ ಸೇರುತ್ತಿದ್ದವು. ಅಂತಾಕ್ಷರಿ stock ಮುಗಿಯುವ ಹೊತ್ತಿಗೆ ಶ್ರೀವರ್ಧನ ತಲುಪಿದೆವು. ಬೀಚ್‌ನಲ್ಲಿ ಎಲ್ರನ್ನೂ ಬಿಟ್ಟು ಊಟದ address ಹಿಡಿದು ಹೋದೆವು. ಸ್ವಲ್ಪ ಸುತ್ತಾಡಿದ ಮೇಲೆ ಒಂದು ಸಗಣಿ ಸಾರಿಸಿದ ಮನೆ ಮತ್ತು ಅಂಗಳ ಕಾಣಿಸಿತು.

ಖಾನಾವಳಿ ನಡೆಸುತ್ತಿದ್ದ ಮನೆಯಾಕೆ, ಚಪಾತಿ time ಆಯ್ತು, ಬರೀ ಅಮ್ಟಿ ಭಾತ್, ಲೋಣ್ಚ 14 ರೂ. per plate ಕೊಡ್ತೀವಿ. ಅಂದ್ಳು. ಸರಿ, 2 ಗಂಟೆ ಮಧ್ಯಾಹ್ನ ಎಲ್ರಿಗೂ ಹಸಿವಾಗಿದ್ರಿಂದ ಸಿಕ್ಕಿದ್ದೇ ಅಮೃತ ಅಂತ ಒಪ್ಪಿದ್ದಾಯ್ತು. ಎಲ್ರೂ ಕೈಕಾಲು ತೊಳೆದು ಊಟಕ್ಕೆ ಕುಳಿತೆವು. ಬಿಸಿ ಬಿಸಿ ಅನ್ನ ಹಿತವಾದ ಸಾರು, ಉಪ್ಪಿನಕಾಯಿ ಜೊತೆ ಲೊಟ್ಟೆ ಹೊಡೆಯುವ ಹಾಗೆ ಆಯಿತು. ಎರಡನೆಯ ಸಲ ಮತ್ತೆ ಅನ್ನಸಾರು ಹಸಿವೆಗೆ ಆಜ್ಯ ಆಯಿತು. ಮೂರನೆಯ ಸಲ, ಚಪಾತಿ ಇಲ್ಲದ್ದರಿಂದ ಅನ್ನಸಾರು ಕಲೆಸಿ ಹೊಟ್ಟೆ ಸೇರಿಸಿದ್ದಾಯಿತು. ಇನ್ನೊಂದು ಸಲ ಅನ್ನಬಂದಾಗ ಸಾಕಪ್ಪಾ, ಮಜ್ಜಿಗೆಯೊಂದಿಗೆ ಮುಗಿಸಿ ಬಿಡೋಣ ಅಂದ್ಕೊಂಡ್ರೆ ಮತ್ತೆ ಸಾರು. ತಡೀಲಾರದೆ ಮಜ್ಜಿಗೆ ತನ್ನಿ ಅಂದ್ರೆ. ನಾನು ಹೇಳಿದ್ದು "ಮಸ್ತ್ ಅಮ್ಟಿ ಭಾತ್‌ಚ್" ಎಂದು ಅವಳು ಹೇಳಿದಾಗ ನಾವು ಸುಸ್ತು, ಎಲೆ ಮುದುರಿ ಎದ್ದೆವು. ಅಂತೂ ಇಷ್ಟಾದರೂ ಕರುಣಿಸಿದೆಯಲ್ಲಾ ಅಂತ ಅಂದ್ಕೊಂಡು ಒಬ್ಬೊಬ್ಬರಾಗಿ ಬಸ್ ಹತ್ತಿದ್ದೆವು.

ಮತ್ತೆ ಹರಿಹರೇಶ್ವರದ ಕಡೆಗೆ ಪಯಣ ಸಾಗಿತು. ಹಾವಿನ ತಿರುವಿನಂತಿದ್ದ roadಗಳಲ್ಲಿ ನಮ್ಮ Auto driver ದಾರಿ ತಪ್ಪಿ, ಮುಂದೆ ಹೋದ ಮೇಲೆ ಹಿಂದೆ ವಾಪಸ್ಸು ಬರುವುದು ನಡೆದೇ ಇತ್ತು.

ಮೊದಲೇ Auto driver ಹೇಳಿಕೇಳಿ ಸಿಕ್ಕ ಸಣ್ಣ ಜಾಗದಲ್ಲೇ ನುಸುಳಿದವ, ಘಟ್ಟಗಳನ್ನು ಏರುವಾಗಲೆಲ್ಲಾ ನಮ್ಮೆಲ್ಲರ ಹೃದಯ ಕೈಗೆ ಬಂದಂತಾಗ್ತಿತ್ತು. ಸಾವಿತ್ರಿ, ಮೂರ್ತಿ ಇಬ್ರೂ driverನ mood ನಲ್ಲಿಡಲು ಹಾಗೂ guide ಮಾಡಲು ಅವನ cabinನಲ್ಲೇ ಕೂತು ಬಿಟ್ಟಿದ್ರು.

ಇಕ್ಕೆಲಗಳಲ್ಲೂ ಪ್ರಕೃತಿ ಸೌಂದರ್ಯ ಸವಿಯುತ್ತಾ ಹರಿಹರೇಶ್ವರ ತಲುಪುವ ಹೊತ್ತಿಗೆ ಸಂಜೆ 4-00 ಗಂಟೆ ಆಗಿತ್ತು. ಪಶ್ಚಿಮ ಘಟ್ಟದಲ್ಲಿ ಸರಕಾರದವರು ಬೇಕೆಂತಲೇ ನಿರ್ಲಕ್ಷ್ಯವಾಗಿಟ್ಟಿರುವ ಹಳ್ಳಿ.

ಮಹಿಳಾ ಮಂಡಲಕ್ಕೆ ದೊಡ್ಡ ಉಪಕಾರ ಮಾಡ್ತೀನಿ ಅಂತ. ನಮ್ಮನೆಯವರು ಅಲ್ಲಿಯ M.L.A. ಇವರ ಪರಿಚಯದವನಾದ್ರಿಂದ, ಅವನಿಂದ ಒಂದು ಶಿಫಾರಸು ಪತ್ರವನ್ನು ಇಳಿದುಕೊಳ್ಳುವ ವ್ಯವಸ್ಥೆಗಾಗಿ ಕೊಡಿಸಿದ್ದರು. ಎಲ್ರನ್ನೂ ಬಸ್‌ನಿಂದ ಇಳಿಸಿ Beachಗೆ ಕಳಿಸಿ, ನಾನು Secretary ಇಬ್ರೂ ಪತ್ರ ಹಿಡಿದುಕೊಂಡು ಹೊರಟೆವು. ಸ್ವಲ್ಪ ಸುತ್ತಾಡಿದ ಮೇಲೆ ಒಂದು ವಾಡೆಯ ತರಹದ ಮನೆ ಸಿಕ್ಕಿತು. ಅಲ್ಲಿದ್ದ ಮಂಧಿ ಮಾಗಧರ ಗುಂಪು ನೋಡೇ M.L.A. ಇರುವ ವಿಷಯ ಖಾತ್ರಿ ಆಯಿತು. ಅವರ ಊಟ ಆಗುತ್ತಿದ್ದುದರಿಂದ, ನಾವು ಹೊರಗಡೆಯೇ ಕಾಯುತ್ತ ಕುಳಿತೆವು. 4-5 ನಿಮಿಷದ ನಂತರ ಒಬ್ಬ ದೊಡ್ಡ ಆಕಾರದ ವ್ಯಕ್ತಿ ಬಂದು ತಾನು ಸಾವಂತ್ ಎಂದು ಪರಿಚಯ ಮಾಡಿಕೊಂಡ. ಗುಡ್ಡದ ಮೇಲಿರುವ Guest Houseನ್ನು ನಮಗೆ ಕೊಡಲು ಪಕ್ಕದಲ್ಲಿದ್ದವನಿಗೆ ಹೇಳಿದ. ಅವನಿಗೆ thanks ಹೇಳಿ ಹೊರಬಂದೆವು.

Modern ಆಗಿರುವ ಎರಡು ದೊಡ್ಡ rooms with attached bath & toilet ನೀರಿಗೂ ಅನುಕೂಲವಿದೆ ಎಂದು ಖುಶಿ ಪಟ್ಟೆವು. Room Keys ತೊಗೊಂಡು caretakerಗೆ ಹೇಳಿ ಕೆಳಗಿಳಿದೆವು.

ಇರುವ ಒಂದೇ ರಾಜ ಬೀದಿಯಲ್ಲಿರುವ ಖಾನಾವಳಿಯಲ್ಲಿ Tea ಮಾಡಿಸಿಕುಡಿದು, ಮಿಕ್ಕವರಿಗೆಲ್ಲ Order ಮಾಡಿ, ರಾತ್ರಿ ಊಟದ ವ್ಯವಸ್ಥೆ

ಮಾಡಿ ಮಹಿಳೆಯರಿದ್ದ Beachಗೆ ಹೋದೆವು.

ಎದುರುಗಡೆ ಮುಳುಗುತ್ತಿರುವ ಸೂರ್ಯ, ವಿಶಾಲವಾದ ಸಮುದ್ರ, ಒಂದು ಪಕ್ಕದಲ್ಲಿ ನಿಂತ ಕೋಡುಗನಲ್ಲಿನ ಎತ್ತರದ ಬೆಟ್ಟಗಳು ನಿಂತವರನ್ನು ಮೈಮರೆಸುತ್ತಿದ್ದವು. Commercial ಆಗದ ಬೀಚ್‌ನಲ್ಲಿ ನಾವೇ ನಾವು, ದೊಡ್ಡ ಬಯಲಿನಲ್ಲಿರುವ ಸಮುದ್ರ ತೀರದಲ್ಲಿ ಮನಸಾರೆ ಹಸಿವು ಆಯಾಸ ಮರೆತು ನೀರಿನಲ್ಲಿ ಆಡಿದ್ದಾಯ್ತು.

ಎಲ್ಲ್ರೂ Tea ಕುಡಿದು, ಊಟದ time ತನಕ rest ಮಾಡಲು T.B.ಗೆ ಹೊರಟೆವು. ಮನುಷ್ಯ ಸ್ವಭಾವದ ಪರಿಚಯ ನಾಲ್ಕು ಜನಸೇರಿದಾಗಲೇ ಹೇಗೆ ವ್ಯಕ್ತವಾಗುತ್ತೆ ಅನ್ನೋಕೆ ಉದಾಹರಣೆಗೆ ಒಂದು family ಮುಂಚೆ ಬಂದು bucketಗಳಲ್ಲಿ ತುಂಬಿಸಿದ್ದ ನೀರನ್ನೆಲ್ಲ ಖಾಲಿ ಮಾಡಿ, ಸ್ನಾನ ಮುಗಿಸಿ ಇರುವ ಮಂಚಗಳ ಮೇಲೆ ಪವಡಿಸಿದ್ರು. ಬೇರೆಯೋರ ಪರಿವೆ ಇಲ್ಲದೆ, adjut ಅನ್ನೋ word ಅವರ dictionaryಲಿ ಇಲ್ಲದ್ದರಿಂದ ಅವರ ಕೈಲಿ ಜಗಳವಾಡಲೂ ಮನಸ್ಸಾಗದೆ ಸುಮ್ಮನಾಗ ಬೇಕಾಯ್ತು.

ರಾತ್ರಿ ಊಟಕ್ಕೆ Batch by batch ಆದ್ರಿಂದ ಸುಮಾರು ಒಂದು ಗಂಟೆ ಹೊರಗೆ ಕಾದು ಕೂತಿರಬೇಕಾಯ್ತು. ಅಂತೂ ನಮ್ಮ ಸರದಿ ಬರುವ ಹೊತ್ತಿಗೆ ರಾತ್ರಿ 10-30 ಹೊಡೆದಿತ್ತು. ಚಪಾತಿ ಪಲ್ಯದ ಜೊತೆ, ಅನ್ನಸಾರು, ಮಜ್ಜಿಗೆನೂ ಕೊಟ್ಟದ್ರಿಂದ ಎಲ್ರಿಗೂ ಸಮಾಧಾನವಾಯಿತು. ಮೂರನೆಯ ದಿನ ಬೆಳಿಗ್ಗೆ ತಿಂಡಿಗೆ ಹೇಳಿ ಹೊರಟೆವು.

ರಾತ್ರಿ, ಕತ್ತಲಲ್ಲಿ ನಮ್ಮ ಗುಡ್ಡ ಏರುವುದೇ ಒಂದು ಪ್ರಯಾಸವಾಯಿತು. ಅದುವರೆಗೆ ನಾಪತ್ತೆ ಆಗಿದ್ದ caretaker ಬೆಳಿಗ್ಗೆ ತಾನೇ ತಿಂಡಿ ಮಾಡಿಕೊಡುವುದಾಗಿ ಗಲಾಟೆ ಮಾಡಿದ್ರಿಂದ ಮತ್ತೆ ಖಾನಾವಳಿಯಲ್ಲಿ cancel ಮಾಡಬೇಕಾಯ್ತು. ಬೆಳಿಗ್ಗೆ caretakerಗಾಗಿ ಹುಡುಕಿ ಸಿಗದೆ, ನಾವೇ tank ನಿಂದ ನೀರು ತುಂಬಿಸಿ ತಂದು ಸ್ನಾನ ಮುಗಿಸಿ ಹರಿಹರೇಶ್ವರನ ದರ್ಶನಕ್ಕೆ ಹೊರಟೆವು.

ದೇವಸ್ಥಾನದ ಒಂದರ್ಧ ಮೈಲಿಸುತ್ತಳತೆಯಲ್ಲಿ ಹೂ, ಕಾಯಿ ಮಾರುವವರು ಗಲಾಟೆ ಬೆಳಿಗ್ಗೆ ಸ್ವಲ್ಪ ಹೊತ್ತು ಇತ್ತು. ಅವರನ್ನೆಲ್ಲಾ ದಾಟಿ ದೇವರನ್ನು ನೋಡಿ ಬಂದಾಯ್ತು.

ಹಿಂದಿನ ದಿನದ ಓಡಾಟದಲ್ಲಿ ಪುರುಸೊತ್ತುಸಿಗದ ಕಾರಣ, ನೀವು ಖಂಡಿತ ಮೆಟ್ಟಿಲು ಹತ್ತಿ ನೋಡಿ ಬನ್ನಿ ಅಂತ ನನ್ನನ್ನು ಸ್ನೇಹಿತರು ಬಲವಂತ ಮಾಡಿದರು. ಇನ್ನೂ ಅನುಮಾನಿಸುತ್ತಿದ್ದ ನನ್ನನ್ನು ಸುಧಾ ಹೊರಡಿಸಿದಳು.

ಸುಮಾರು 50 ಮೆಟ್ಟಿಲು ಹತ್ತಿದ ಮೇಲೆ ಎಡಕ್ಕೆ ತಿರುಗಿದ್ದರೆ ಉಸುರು ಕಟ್ಟುವ ಹಾಗಾಯ್ತು.

ಎರಡು ಕೋಡು ಗಲ್ಲುಗಳ ನಡುವಿನ ಕಿರಿದಾದ ದಾರಿಯಲ್ಲಿ ಕಾಣುವ ಸಮುದ್ರ. ಸಮುದ್ರಕ್ಕೆ ಇಳಿಯಲು ಮತ್ತೆ ಕಡಿದಾದ ಮೆಟ್ಟಲುಗಳು. ನೀಲಿ ಆಕಾಶ, ಕರೀ ಶಿಲೆಯ ಕೋಚು ಕೋಚಾಗಿರುವ ಬೆಟ್ಟ, ಮುಂದೆ ಸಮುದ್ರದ ಪ್ರಶಾಂತ ತೀರ, ಒಂದು ಗಳಿಗೆ ಹಾ ಎನ್ನು ವಂತಾಯಿತು. G.S.S.ನ ಕಾವ್ಯ.

ಎಲ್ಲೋ ಹುಡುಕಿದೆ ಕಾಣದ ದೇವರ ।
ಕಲ್ಲು ಮಣ್ಣುಗಳ ಗುಡಿಯೊಳಗೆ ॥

ನೆನಪಿಗೆ ಬಂತು. ಮಾತೇ ಮರೆತು ಮೂಕವಾಗುವ ದೃಶ್ಯ. ಒಂದು ಕ್ಷಣವೂ ಜಾರಿಹೋಗದಂತೆ, ಕಣ್ತುಂಬ ಮನದಣಿಯೆ ಸವಿಯುವಂತಹ ದೃಶ್ಯ. ಕೆಳಗೆ ಇಳಿದರೆ ಬೆಟ್ಟವನ್ನು ಅರ್ಧ ವೃತ್ತಾಕಾರದಲ್ಲಿ ಸುತ್ತುವರೆದಿರುವ ಸಮುದ್ರ. ಆ ಉಪ್ಪು ನೀರಿನ ನಡುವೆಯೂ ಒಂದು ಬಂಡೆಯಿಂದ ಸಿಹಿ ನೀರು ಒಸರುತ್ತಿರುವುದನ್ನು ಕಂಡು ಆಶ್ಚರ್ಯವಾಯಿತು. ಚೂಪಾದ ಬಂಡೆಕಲ್ಲುಗಳ ಮೇಲೆ ನಡೆದು ಬೆಟ್ಟವನ್ನು ಸುತ್ತಿ ದೇವಾಲಯದೆಡೆಗೆ ಬಂದೆವು. ನನಗಂತೂ ಈ ದೃಶ್ಯ miss ಮಾಡಿದ್ರೆ ಬಹುಶಃ ಮತ್ತೆ ಜೀವನದಲ್ಲಿ . ನೋಡಲು ಸಿಗುತ್ತಿರಲಿಲ್ಲವೇನೋ ಅನ್ನಿಸಿತ್ತು.

ಆಗ್ಲೇ 8-30 ಆದ್ರಿಂದ ಎಲ್ರನ್ನೂ ಬಸ್‌ನಲ್ಲಿ ಕೂಡಿಸೋದು ಕಪ್ಪೆ ತಕ್ಕಡಿಗೆ ಹಾಕುವ ಕೆಲಸವಾಯ್ತು. ಯಾವಾಗ್ಲೂ ಬಸ್ ಹೊರಡುವ ಸಮಯಕ್ಕೆ ಸರಿಯಾಗಿ, cool drinks ಸೇವಿಸುತ್ತಿದ್ದ ಇನ್ನೊಬ್ಬ ಮನುಷ್ಯನನ್ನು ಹೊರಡಿಸುತ್ತಿದ್ದ ಸಮಯಕ್ಕೆ ತಿಂಡಿ packet ಬಂತು. ಅವನು ಮಾತಾಡಿದ್ದಂತೆ 2kg. ಉಪ್ಪಿಟ್ಟಿಗೆ 60 ರೂ. ಕೊಟ್ಟು ಹೊರಟೆವು. ಬಸ್ ಹೊರಟ ಮೇಲೆ ಉಪ್ಪಿಟ್ಟು ಹಂಚಲು ನೋಡಿದ್ರೆ, ಅಲ್ಲೇನಿದೆ? ನೆನೆದರವೆಗೆ ಒಗ್ಗರಣೆಯಲ್ಲಿ ನಾಲ್ಕು ಸಾಸಿವೆ, ಮೆಣಸಿನ ಕಾಯಿಹಾಕಿದ್ದ. ಅದನ್ನು ನೋಡ್ತಾನೇ ಎದೆ ಧಸ್ ಅಂತು. ಎಲ್ರಿಗೂ ನನ್ನ ಮೇಲೆ ವಿಪರೀತ ಕೋಪ ಬಂತು. ನಾನು arrange ಮಾಡಿದ್ದ T.B. ಮತ್ತು caretaker ತಾನೇ? ಹಿಂದಿನ ರಾತ್ರಿ ನಡೆದ ವಾಗ್ವಾದದಲ್ಲಿ ಒಂದು plateಗೆ ಲೆಕ್ಕ ಹಾಕಿಹೇಳಿದ್ದ. ಆದ್ರೆ ನಾವು ಒಟ್ಟಿಗೆ 2 kg. ಉಪ್ಪಿಟ್ಟು ಅಂತ 60 ರೂ.ಗೆ ಒಪ್ಪಿಸಿದ್ದಿ. ಆ ಸಿಟ್ಟನ್ನು ಹೀಗೆ ತೀರಿಸಿಕೊಂಡಿದ್ದ. ನನಗೂ ತುಂಬಾ ಪೆಚ್ಚಾಯಿತು. Busನಲ್ಲಿ ತಿಂಡಿಕೊಡೋಣ timewaste ಆಗೋಲ್ಲ ಅಂತ ಮಾಡಿದ್ದ plan ಉಲ್ಟಾ ಆಯಿತು.

ದೀಪಾವಳಿ ಮುಗಿಸಿ ಹೊರಟಿದ್ದರಿಂದ ಎಲ್ರಿಗೂ ತಿಂಡಿ ತರಲು ಹೇಳಿದ್ದಿ, ಬೆಳಗಿನ ಹಸಿವೆಗೆ ಮರಾಠಿ ಫರಾಳ್ ತುಂಬ ರುಚಿಕೊಟ್ಟಿತು. ದಾರಿಯಲ್ಲಿ ಸಿಕ್ಕ ದೊಡ್ಡ ಊರಿನಲ್ಲಿ ತಿಂಡಿ ವಿಚಾರಿಸಲು ಹೋದ್ರೆ ಕುಡಿಯಲೂ ಮನಸ್ಸಾಗದೆ ಹಿಂತಿರುಗಬೇಕಾಯ್ತು. (ಮೀನಿನ ವಾಸನೆಯಿಂದ) ಹಸಿದ ಹೊಟ್ಟೆಯಲ್ಲೇ ಮತ್ತೆ ಪಯಣ ಮುಂದುವರೆಯಿತು. ಗಂಟೆ 12ರ ನಂತರ restlessness ಶುರುವಾಯ್ತು. ದಾರಿ ಸವೆದಷ್ಟೂ, ಸಮುದ್ರದ ಪಕ್ಕದಲ್ಲೇ ಗಂಟೆ ಗಟ್ಟೆ ಹೋದರೂ ಮುರುಡ್ ಸಿಗುವ ಸೂಚನೆ ಇಲ್ಲ.

ದಾರಿಯಲ್ಲಿ ಸಿಕ್ಕವರನ್ನೆಲ್ಲಾ ಮುರುಡ್ ಇನ್ನೆಷ್ಟು ದೂರ ಅಂತ ವಿಚಾರಿಸಿದ್ದಾಯ್ತು. ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಅನ್ನೋಗಾದೆ ಹಾಗೇ ಸಮುದ್ರದ ಮೇಲಿನಿಂದ 15 ನಿಮಿಷ ಪ್ರಯಾಣದ ದಾರಿಯನ್ನು ರಸ್ತೆಯ ಮೂಲಕ ಸುಮಾರು 6-7 ಗಂಟೆ ಸವೆಸಿದ್ದಾಯ್ತು. ಸುಮಾರು $2^1/_2$ ಗಂಟೆಗೆ ಮರುಡ್ ತಲುಪಿದೆವು. ಊರು ತಲುಪುತ್ತಲೇ ಬಸ್‌ನಿಂದ ಇಳಿದು ಊಟದ ಖಾನಾವಳಿಗೆ ಓಡಿದೆವು.

ಆ ಊರಿನ ಹೆಸರಾಂತ ಪಾಟೀಲ್ ಖಾನಾವಳಿಯಲ್ಲಿ ಊಟಕ್ಕೆ Book ಮಾಡಿದ್ದಾಯ್ತು. ಸಮುದ್ರದ ತಡಿಯಲ್ಲೇ ಇರುವ ಖಾನಾವಳಿ Veg.-Non-Veg. ಎರಡೂ ಸಪ್ಲೈ ಮಾಡ್ತಿದ್ರಿಂದ ಕೆಲವರಿಗೆ ಬೇಸರವಾಯ್ತು. ಅರ್ಧಗಂಟೆ ಕಾದ ಮೇಲೆ ಒಂದೊಂದೇ table occupy ಮಾಡಿದ್ದಾಯ್ತು.

'ಅನ್ನಗಂಡ' ವೋ ಅನ್ನೋ ಹಾಗೆ, ಒಬ್ಬ ರಾಜಕಾರಣಿ ಮತ್ತು ಅವನ ಗುಂಪು ಬಂತು. ಸರಿ, ಅವ್ರಿಗೆ V.I.P. treatment ನಡೀತಿರೋವಾಗಲೇ, ಇನ್ನೊಂದು ನಾಟಕ ಶುರುವಾಯ್ತು. Hotelನ ಒಬ್ಬ serverನ ಹಿಡಿದು ತಂದು ಒಬ್ಬ ಗೂಂಡ ಚೆನ್ನಾಗಿ ಥಳಿಸಲು ಶುರುಮಾಡಿದ. Hotelನವರು ಜಗಳ ಬಿಡಿಸುವ ಹೊತ್ತಿಗೆ ನಮ್ಮ patience ಹೋಗಿತ್ತು. 3 ಗಂಟೆ ಹೊತ್ತಿಗೆ ಒಳ್ಳೆ ಊಟ ಸಿಕ್ಕಿದ್ರೂ ಹೊಟ್ಟೆ ತುಂಬ ಊಟ ಮಾಡಲಾಗಲಿಲ್ಲ.

ಉಂಡವರೇ ಮತ್ತೆ ಬಸ್ ಹತ್ತಿ ಜಂಜೀರಾ ಕೋಟೆ ನೋಡಲು ಹೊರಟೆವು. ಈ ಮಧ್ಯದಲ್ಲಿ ನಮ್ಮ ಗುಂಪಿನಲ್ಲಿ ತುಂಬಾ ಆಸೆಯಿಂದ ಪಿಕ್‌ನಿಕ್‌ಗೆ ಬಂದಿದ್ದ ಒಬ್ಬ ಮಹಿಳೆಗೆ ರಾತ್ರಿಯಿಂದ ಜ್ವರ ಕಾಯುತ್ತಿತ್ತು. ಒಬ್ಬಳೇ ಬಸ್‌ನಲ್ಲಿ ಇದ್ದಿದ್ರಿಂದ ಗಾಬರಿ ಆಗಿ ಅಳಲು ಶುರುಮಾಡಿದ್ಲು. ಜೋಶಿ ಓಡಿ ಹೋಗಿ, Local doctorನ ಕರೆತಂದ್ರು. ಅವಳಿಗೆ treatment ಕೊಡಿಸಿ ಪ್ರಯಾಣ ಮುಂದುವರೆಸಿದೆವು.

15 ನಿಮಿಷದ ಪ್ರಯಾಣವನ್ನು ನಮ್ಮ Auto driver 30 ನಿಮಿಷದಲ್ಲಿ reverse ಹೊಡೆದೂ, ಹೊಡೆದೂ ತಲುಪಿಸಿದ. ಆಗಲೇ ಸಂಜೆ ಆಗ್ತಿದ್ರಿಂದ ಬೇಗ ಬೇಗ ದೋಣಿ ಹತ್ತಿದೆವು. ಅಲ್ಲಿಯ locals ಮುಸ್ಲಿಂಗಳೇ ಆದ್ರಿಂದ boatಗಳಿಗೂ ಅವರದೇ ಹೆಸರುಗಳನ್ನಿಟ್ಟಿದ್ದರು. ಕೈಗೆ ನೀರು ತಾಕುವಷ್ಟು

(ಪುಟ 16ಕ್ಕೆ)

# ಸಂಮೋಹಿನಿ ಚಿಕಿತ್ಸೆ - 22

● ಡಾ| ಉಷಾರಾವ್

### ಸ್ವಯಂಸೂಚನೆ ಹಾಗೂ ಉಸಿರಾಟದ ವ್ಯಾಯಾಮಗಳು

ಪ್ರಾಣಿಗಳಿಗೆ ಸಾಕಷ್ಟು ವ್ಯಾಯಾಮ ದೊರೆಯುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಪರಿಣಾಮವಾಗಿ ಅವು ಪ್ರಕೃತಿ ಸಹಜ ರೀತಿಯಲ್ಲಿ ಉಸಿರಾಡುತ್ತವೆ. ಆದರೆ ಮನುಷ್ಯರಾದ ನಾವು, ಯಾವುದೇ ವ್ಯಾಯಾಮ ಮಾಡದೆ, ಉಸಿರು ಕಟ್ಟಿಸುವಂಥ ಆಫೀಸುಗಳು ಅಥವಾ ಮನೆಗಳಲ್ಲಿದ್ದುಕೊಂಡು ಕೆಲಸ ಮಾಡುತ್ತೇವೆ. ಆದರೆ ನಮ್ಮ ಶರೀರಕ್ಕೆ ಬಹಳ ಅಗತ್ಯವಾಗಿರುವ ವ್ಯಾಯಾಮ ಮಾಡುವುದಿಲ್ಲ. ದುಡಿದು ದುಡಿದು ದಣಿಯುತ್ತೇವೆ, ಸ್ವಚ್ಛ ಗಾಳಿಯಿಲ್ಲದಿರುವುದರಿಂದ ಶಾರೀರಕವಾಗಿ ಶಕ್ತಿಗುಂದುತ್ತೇವೆ. ನಿಜ ಹೇಳಬೇಕೆಂದರೆ, ನಗರವಾಸಿಗಳಾದ ನಾವು ಸ್ವಚ್ಛ ಗಾಳಿಯ ಸೇವನೆಯಿಲ್ಲದೆ ಬಳಲುತ್ತೇವೆ. ಕಡೆಗೊಂದು ದಿನ ಕುಟುಂಬದ ವೈದ್ಯರ ಬಳಿ ಹೋಗಿ ತೋರಿಸುತ್ತೇವೆ. 'ಪ್ರಿಯ ಸ್ನೇಹಿತರೆ, ನಿಮಗೆ ಅಗತ್ಯವಿರುವುದು ಔಷಧವಲ್ಲ, ಹವೆಯ ಬದಲಾವಣೆ' ಎಂದು ವೈದ್ಯರು ಹೇಳುತ್ತಾರೆ. ಆದರೆ, ಆ ಬಗೆಗೆ ಪ್ರಯತ್ನ ಮಾಡಲು ವಾರಗಟ್ಟಲೆ ಹಾಗೂ ತಿಂಗಳುಗಳ ಗಟ್ಟಲೆ ಸಮಯ ವ್ಯರ್ಥ ಮಾಡುತ್ತೇವೆ.

ಅನೇಕ ಮಂದಿ ಇಂಥ ತೊಂದರೆಗಳೊಡನೆ ನನ್ನಲ್ಲಿಗೆ ಬರುತ್ತಾರೆ. ಅವರ ಚರಿತ್ರೆಯನ್ನು ಪೂರ್ತಿಯಾಗಿ ಪರಿಶೀಲಿಸಿದ ನಂತರ ಉಸಿರಾಟದ ವ್ಯಾಯಾಮಗಳ ಬಗೆಗೆ ಅವರಿಗೆ ತಿಳಿಸುವುದು ಅಗತ್ಯ ಎಂಬ ನಿರ್ಧಾರಕ್ಕೆ ಬರುತ್ತೇನೆ. ಅಂಥವರಿಗೆ ಕೆಳಕಂಡಂತೆ ಉಪದೇಶ ನೀಡುತ್ತೇವೆ.

ಉಸಿರಾಡುವುದರಲ್ಲಿ ತಪ್ಪಿಲ್ಲದ ಹಾಗೂ ತಪ್ಪಾದ ವಿಧಾನಗಳಷ್ಟೇ ಅಲ್ಲದೆ ಸರಿಯಾದ ವಿಧಾನವೆಂಬುದೂ ಇದೆ. ಆದುದರಿಂದ ಸರಿಯಾದ ಹಾಗೂ ಅದನ್ನು ಮಾಡುವ ಅತ್ಯುತ್ತಮ ವಿಧಾನದ ಬಗೆಗೆ ತಿಳಿದುಕೊಂಡಿರಬೇಕು.

ತನ್ನ ಶ್ವಾಸಕೋಶದೊಳಕ್ಕೆ ಸಾಕಷ್ಟು ಪ್ರಮಾಣದಲ್ಲಿ ಗಾಳಿ ಹೋಗಿಲ್ಲ ಎಂಬುದನ್ನು ತಿಳಿದುಕೊಂಡರೆ, ಅನಂತರ ಆತ /ಆಕೆ ತಕ್ಷಣ ಮನೆಯಿಂದ ಹೊರ ಹೋಗಿ ಶುದ್ಧ ಗಾಳಿಯನ್ನು ಉಸಿರಾಡಲು ಪ್ರಾರಂಭಿಸಬೇಕು. ಕೆಲವರು ಪ್ರಾಯಶಃ ಸರಿಯಾದ ಗಾಳಿಯ ಸಂಚಾರವಿಲ್ಲದ ಆಫೀಸು ಕೋಣೆಯಲ್ಲಿ ಬಂದಿಯಾಗಿರಬಹುದು. ಅಂಥವರು ಬಹಳ ತುರ್ತಾಗಿ ಮಾಡಬೇಕಾದ ಕೆಲಸವೆಂದರೆ ಕೋಣೆಯೊಳಕ್ಕೆ ಶುದ್ಧ ಗಾಳಿಯನ್ನು ತರಿಸಿಕೊಳ್ಳಲು ವ್ಯವಸ್ಥೆ ಮಾಡಬೇಕು. ವೆಂಟಿಲೇಷನ್ ವ್ಯವಸ್ಥೆಯನ್ನೂ ಬದಲಾಯಿಸಬೇಕು. ದೀರ್ಘವಾಗಿ ಉಸಿರಾಡುವುದು ಬಹಳ ಅಗತ್ಯ.

ಅನೇಕರು ಮುಖ್ಯವಾಗಿ ಯೋಗ್ಯ, ವ್ಯಾಯಾಮಗಳನ್ನು ಮಾಡುವವರು, ವಿವಿಧ ರೀತಿಯ ಉಸಿರಾಟದ ವಿಧಾನಗಳನ್ನು ಬೋಧಿಸುತ್ತಾರೆ. ಅವು ವಿಭಿನ್ನವಾಗಿದ್ದರೂ ಪ್ರತಿಯೊಂದು ಪದ್ಧತಿಯೂ ಇನ್ನೊಂದರಷ್ಟೇ ಉತ್ತಮವಾದುದು. ಏಕೆಂದರೆ, ಈ ಎಲ್ಲ ಬಗೆಯ ಉಸಿರಾಟದ ಪದ್ಧತಿಗಳೂ ಎರಡು ಬಗೆಯ ಉದ್ದೇಶವನ್ನು ಈಡೇರಿಸುತ್ತವೆ. ಅಂದರೆ ಮೊದಲನೆಯದಾಗಿ ಈ ಪದ್ಧತಿಯನ್ನು ಪ್ರಾಮಾಣಿಕವಾಗಿ ಅಭ್ಯಸಿಸುವ ವ್ಯಕ್ತಿ, ವ್ಯಾಯಾಮ ಮಾಡದೇ ಇರುವ ವ್ಯಕ್ತಿಗಿಂತ ಹೆಚ್ಚು ಗಾಳಿಯನ್ನು ಶ್ವಾಸಕೋಶಕ್ಕೆ ಪಡೆಯುತ್ತಾನೆ / ಳೆ; ಮತ್ತು ಎರಡನೆಯದಾಗಿ, ಪ್ರತಿ ಸಾರಿ ಉಸಿರಾಟದ ವ್ಯಾಯಾಮ ಮಾಡಿದಾಗಲೂ, ಅದನ್ನು ಒಂದು ಉದ್ದೇಶಕ್ಕಾಗಿ ಮಾಡಲಾಗುತ್ತದೆ, ಮತ್ತು ಮನಸ್ಸಿನಲ್ಲಿಟ್ಟುಕೊಂಡಿರುವ ಆ ಉದ್ದೇಶ ಸಾಕಾರಗೊಳ್ಳುತ್ತದೆ, ಏಕೆಂದರೆ ವಿಚಾರ ಕಾರ್ಯರೂಪ ತಳೆಯುತ್ತದೆ. ಪರೋಕ್ಷವಾಗಿ, ವ್ಯಾಯಾಮದೊಂದಿಗೇ ಸ್ವಯಂ ಸೂಚನೆಗಳೂ ತಿಳಿದೋ ತಿಳಿಯದೆಯೋ ಉಸಿರಾಟಕ್ಕೆ ಸಹಾಯ ಮಾಡಿ ಅಪೇಕ್ಷಿತ ಫಲಿತಾಂಶಗಳಿಗೆ ಹಾದಿ ಮಾಡುತ್ತವೆ.

ಸಾಮಾನ್ಯವಾಗಿ ಬಲಿಷ್ಠ ಹಾಗೂ ಆರೋಗ್ಯವಂತ ವ್ಯಕ್ತಿ ದೀರ್ಘವಾಗಿ ಉಸಿರಾಡುತ್ತಾನೆ. ಆದುದರಿಂದ ಪ್ರತ್ಯೇಕ ಪ್ರಯತ್ನ ಇಲ್ಲದೆಯೇ ತನಗೆ ಅಗತ್ಯವಾದಷ್ಟು ಪ್ರಮಾಣದ ಗಾಳಿಯನ್ನು ಪಡೆಯುತ್ತಾನೆ (ಳೆ) ಅಂಥವರಿಗೆ ಬೇರಾವುದೇ ಉಸಿರಾಟದ ವ್ಯವಸ್ಥೆ ಅಗತ್ಯವಿರುವುದಿಲ್ಲ. ಆದರೆ ದೈಹಿಕವಾಗಿ ದುರ್ಬಲನಾದ ವ್ಯಕ್ತಿ ದೀರ್ಘವಾಗಿ ಉಸಿರಾಡುವುದಿಲ್ಲ. ಏಕೆಂದರೆ ಅನಾರೋಗ್ಯದ ಪ್ರಮಾಣಕ್ಕೆ ಅನುಗುಣವಾಗಿ ಉಸಿರಾಟದ ಅವಯವಗಳಿಗೆ ತಲುಪುವ ಸಂವೇದನೆಗಳು ಕ್ಷೀಣವಾಗಿರುತ್ತವೆ. ಇಂಥ ವ್ಯಕ್ತಿಗಳಿಗೆಲ್ಲ ಅಗತ್ಯವಿರುವುದು ತಮ್ಮ ಶ್ವಾಸಕೋಶಗಳೊಳಕ್ಕೆ ಸಾಮಾನ್ಯವಾಗಿ ಪಡೆಯುವ ಗಾಳಿಗಿಂತ ಹೆಚ್ಚು ಗಾಳಿಯನ್ನು ಸೇವಿಸಿರುವುದಾಗಿ ಅವರಿಗೆ ಮನವರಿಕೆಗೆ ಆಗುವವರೆಗೆ ಉಸಿರೆಳೆದುಕೊಳ್ಳುವುದು. ಪ್ರತಿದಿನ ಕೆಲವು ನಿಮಿಷಗಳ ವರೆಗೆ ಎಂಟು ಅಥವಾ ಹತ್ತು ಸಾರಿ ದೀರ್ಘವಾಗಿ ಉಸಿರೆಳೆದುಕೊಂಡರೆ ಖಂಡಿತವಾಗಿ ಪ್ರಯೋಜನಕರ ಪರಿಣಾಮಗಳು ಉಂಟಾಗುತ್ತವೆ.

ಹೇಗೇ ಇದ್ದರೂ ಕೇವಲ ಹೆಚ್ಚು ಗಾಳಿಯನ್ನು ಉಸಿರೆಳೆದುಕೊಳ್ಳಬೇಕೆಂದು ಒಬ್ಬ ವ್ಯಕ್ತಿಗೆ ಹೇಳಿದರಷ್ಟೇ ನಿರೀಕ್ಷಿತ ಫಲಿತಾಂಶಗಳನ್ನು ಪಡೆಯಲು ಸಾಕಾಗುವುದಿಲ್ಲ.

ಅವರಿಗೆ ಉಸಿರೆಳೆದುಕೊಳ್ಳುವ ಸರಿಯಾದ ವಿಧಾನವನ್ನು ತಿಳಿಸಬೇಕು. ನಾನು ನನ್ನ ರೋಗಿಗಳಿಗೆ ಬೋಧಿಸುವ ಸರಿಯಾದ ವಿಧಾನ ಕೆಳಕಂಡಂತಿರುವುದು.

ಹೊಟ್ಟೆಯಿಂದ ದೀರ್ಘವಾಗಿ ಪೂರ್ತಿ ಉಸಿರೆಳೆದುಕೊಳ್ಳಿ. ಅದು ಎಷ್ಟು ದೀರ್ಘವಾಗಿರಬೇಕೆಂದರೆ ಉಸಿರೆಳೆದುಕೊಳ್ಳುವಾಗ ನಿಮ್ಮ ಎದೆ ಮೇಲಕ್ಕೆ ಉಬ್ಬುವುದಷ್ಟೇ ಅಲ್ಲದೆ ಹೊಟ್ಟೆಯ ಭಾಗ ಹಿಗ್ಗಿರುತ್ತದೆ ಎಂಬುದು ನಿಮಗೆ ತಿಳಿದಿರುವುದು. ಈಗ ಎದೆಯನ್ನು ಮೇಲಕ್ಕೇ ಇಟ್ಟುಕೊಂಡು ನಿಧಾನವಾಗಿ ಹೊಟ್ಟೆಯನ್ನು ಒಳಗೆ ಹಾಗೇ ಮೇಲೆ ಎಳೆದುಕೊಳ್ಳುತ್ತಾ ಉಸಿರನ್ನು (ಶ್ವಾಸ) ಬಿಡಿ. ಹೊಟ್ಟೆಯನ್ನು ಸಂಕೋಚಗೊಳಿಸಿ ಅದನ್ನು ಮೇಲಕ್ಕೆ ಎಳೆದುಕೊಳ್ಳುವುದರಿಂದ ಶ್ವಾಸಕೋಶದಲ್ಲಿರುವ ಗಾಳಿ ಬಲವಂತದಿಂದ ಹೊರ ಬಂದಿಳಿದಾಗ, ಮತ್ತೆ ಹೊಟ್ಟೆ ಹಿಗ್ಗುವವರೆಗೆ ಇನ್ನೊಂದು ಬಾರಿ ಉಸಿರೆಳೆದುಕೊಳ್ಳಿ, ಮತ್ತು ಇದೇ ರೀತಿ ಉಸಿರಾಟವನ್ನು ಮುಂದುವರಿಸಿ ಈ ಎಲ್ಲ ಸಮಯದಲ್ಲೂ ಹೆಚ್ಚು ಚಲನೆಯಿಲ್ಲದಂತೆ ಎದೆಯನ್ನು ಮೇಲಕ್ಕೆ ಹಿಡಿದಿಟ್ಟುಕೊಳ್ಳಿ.

ಹೀಗೆ ಹೊಟ್ಟೆಯ ಮೂಲಕ ಉಸಿರಾಡುವುದರಿಂದ ಮೂರು ಬಗೆಯ ಅನುಕೂಲಗಳಿರುವುದು.

1. ಇದರಿಂದ ಒಬ್ಬ ವ್ಯಕ್ತಿಯ ಶ್ವಾಸಕೋಶಗಳನ್ನು ಅದರ ಪೂರ್ತಿ ಸಾಮರ್ಥ್ಯಕ್ಕೆ ತಕ್ಕಂತೆ ತುಂಬಲು ಸಾಧ್ಯವಾಗುವುದು.
2. ಹೊಟ್ಟೆಯ ಚಲನೆಯು ಕರುಳುಗಳಿಗೆ ಮತ್ತು ಹೊಟ್ಟೆಗೆ ಒಂದು ಸಂದೇಶದಂತೆ ಕಾರ್ಯ ನಿರ್ವಹಿಸುವುದು.
3. ಹಲವು ವರ್ಷಗಳಿಂದ ಬಾಧಿಸುತ್ತಿರುವ ಮಲಬದ್ಧತೆ ಕೆಲವೇ ವಾರಗಳಲ್ಲಿ ನಿವಾರಣೆಯಾಗಬಹುದು.

ಈ ವ್ಯಾಯಾಮವನ್ನು ಕುಳಿತು ಅಥವಾ ನಿಂತು

ಅಥವಾ ಮಲಗಿ ಅಭ್ಯಾಸ ಮಾಡಬಹುದು. ಆದರೆ ಎಚ್ಚರದಿಂದ ಪ್ರತಿಸಾರಿ ಕೆಲವು ನಿಮಿಷಗಳ ವರೆಗೆ ಹವ್ಯಾಸವಾಗುವವರೆಗೆ ದಿನಕ್ಕೆ ಎಂಟು ಅಥವಾ ಹತ್ತು ಸಾರಿ ಮಾಡಬೇಕು.

ಈಗ ಮುಖ್ಯ ವಿಷಯಕ್ಕೆ ಬರೋಣ. ಒಬ್ಬ ವ್ಯಕ್ತಿ ಹೊಟ್ಟೆಯ ಮೂಲಕ ಉಸಿರಾಡುವ ವ್ಯಾಯಾಮವನ್ನು ಮಾಡುತ್ತಿರುವಾಗ ಜತೆ ಜತೆಯಲ್ಲೇ ಒಂದು ಉದ್ದೇಶವನ್ನು ಸಾಧಿಸಲು ಪ್ರಯತ್ನಿಸಬೇಕು. ನಿರ್ದಿಷ್ಟ ಸ್ವಯಂಸೂಚನೆಗಳ ನಂತರ ಮಾಡುವ ಪ್ರತಿಯೊಂದು ವ್ಯಾಯಾಮವೂ ಅದ್ಭುತ ಫಲಿತಾಂಶಗಳನ್ನು ನೀಡುವುದು. ಆದುದರಿಂದ, ನನ್ನ ಪ್ರತಿಯೊಬ್ಬ ಓದುಗರು ತಮ್ಮ ಸ್ವಯಂಸೂಚನೆಯನ್ನು ರೂಪಿಸಲು ದೀರ್ಘ ಉಸಿರಾಟದ ಅಭ್ಯಾಸವನ್ನು ಮಾಡಬೇಕೆಂದು ನಾನು ಮತ್ತೆ ಶಿಫಾರಸು ಮಾಡುತ್ತೇನೆ. ತಮ್ಮ ಮನಸ್ಸಿನ ಪ್ರೇರಣೆಯಂತೆ ಪ್ರತಿಸಾರಿ ಈ ವ್ಯಾಯಾಮವನ್ನು ಮಾಡುವುದರಿಂದ ಅದರ ಪರಿಣಾಮವನ್ನು ಹೆಚ್ಚಿಸಬಹುದು.

ಸ್ವಯಂಸೂಚನೆಯ ಬುದ್ಧಿಶಾಲೀ ಬಳಕೆಯ ಮೂಲಕ, ಶಾರೀರಕ ಆರೋಗ್ಯವನ್ನು ಉತ್ತಮ ಪಡಿಸುವುದಷ್ಟೇ ಅಲ್ಲದೆ, ಅಪೇಕ್ಷಿತ ಮಾನಸಿಕ ಪರಿಸ್ಥಿತಿಗಳನ್ನು ಉಂಟುಮಾಡುವಲ್ಲಿ ಮತ್ತು ನಮ್ಮ ದೈನಂದಿನ ಜೀವನಗಳಲ್ಲಿ ಪ್ರಭಾವ ಬೀರುವಲ್ಲಿ ಬಹಳಷ್ಟು ಸಹಾಯಕವಾಗುವುದು. ನಮಗೆ ಪ್ರಯೋಜನವಾಗುವಂಥ ಸ್ವಯಂ ಸೂಚನೆಗಳನ್ನು ಅಧ್ಯಯನ ಮಾಡಿ ಅವುಗಳನ್ನು ನಿಷ್ಠೆಯಿಂದ ಬಳಸಿಕೊಳ್ಳುವುದು ಒಳ್ಳೆಯದು. ಆದರೆ ಕೆಲವು ಸಂದರ್ಭಗಳಲ್ಲಿ ಸ್ವಯಂ ಸೂಚನೆಗಳ ಉಪಯೋಗವನ್ನು ನೆನೆಪಿಡುವುದು ಕಷ್ಟವಾಗುವುದು. ಈ ಕಾರಣಕ್ಕಾಗಿ ಅವುಗಳನ್ನು ನೆನಪುಮಾಡಿಕೊಳ್ಳಲು ಸಾಧ್ಯವಾಗುವಂತೆ ಏನಾದರೂ ವ್ಯಾವಹಾರಿಕ ಕಾರ್ಯವನ್ನು ಮಾಡುವುದು ಅಪೇಕ್ಷಣೀಯ. ಆ ಕೆಲಸವನ್ನು ಉಸಿರಾಟದ ವ್ಯಾಯಾಮಗಳು ಅದ್ಭುತವಾಗಿ ನಿರ್ವಹಿಸಬಲ್ಲವು. ವಾಸ್ತವವಾಗಿ, ನಾನು ಅದು ಅಗತ್ಯವಿಲ್ಲದ ರೋಗಿಗಳಿಗೂ ಸಹ ದೀರ್ಘ ಉಸಿರಾಟದ ವ್ಯಾಯಾಮಗಳನ್ನು ಮಾಡಲು ವಿಧಿಸುತ್ತೇನೆ. ಏಕೆಂದರೆ ಪ್ರತಿ ಸಾರಿ ಈ ವ್ಯಾಯಾಮಗಳನ್ನು ಮಾಡಿದಾಗ, ನನ್ನ ರೋಗಿಗಳು ಪುನರಾವರ್ತಿ ಮಾಡಬೇಕೆಂದು ನಾನು ಅಪೇಕ್ಷಿಸುವ ಸ್ವಯಂ ಸೂಚನೆಗಳು ರೋಗಿಯ ಮನಸ್ಸಿಗೆ ನೆನಪಿಗೆ ಬರುವುದು. ಈ ವಿಧಾನದಲ್ಲಿ ಹಲವು ಮಾನಸಿಕ ತೊಂದರೆಗಳನು ನಿವಾರಿಸಲಾಗಿದೆ.

ತಮ್ಮ ಸಾಮಾನ್ಯ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳುವ ಅಗತ್ಯವಿರುವವರು ಈ ಕೆಳಗೆ ನೀಡಿರುವ ಸ್ವಯಂ ಸೂಚನೆಗಳನ್ನು ಬಳಸಬಹುದು.

"ಗಾಳಿಯು ಜೀವನದ ಅತ್ಯಾವಶ್ಯಕತೆಗಳಲ್ಲೊಂದು. ನಾನು ಈಗ ದೀರ್ಘವಾಗಿ ಉಸಿರಾಡುತ್ತಿದ್ದೇನೆ. ಈ ಸ್ವಚ್ಛಗಾಳಿ ನನ್ನ ಶ್ವಾಸಕೋಶಗಳೊಳಕ್ಕೆ ಹೋಗುತ್ತಿರುವುದು ನನಗೆ ಒಳ್ಳೆಯ ಸುಖಾನುಭವ ಆಗುತ್ತಿದೆ. ಈ ಸ್ವಚ್ಛ ಗಾಳಿ ನನ್ನ ಇಡೀ ವ್ಯವಸ್ಥೆಯ ಮೇಲೆ ಪ್ರಯೋಜನಕರ ಪರಿಣಾಮ ಬೀರುವುದು. ಆದರಿಂದ ನನಗೆ ಒಳ್ಳೆಯದಾಗುವುದು ಎಂದು ನನಗೆ ಗೊತ್ತಿದೆ. ಅದು ನಾನು ಸೇವಿಸಿದ ಆಹಾರ ಜೀರ್ಣವಾಗುವಂತೆ ಮಾಡುವುದು, ಚೆನ್ನಾಗಿ ನಿದ್ರೆ ಮಾಡಲು ಸಾಧ್ಯವಾಗುವುದು. ಈ ದೀರ್ಘ ಉಸಿರಾಟ ಮಾನಸಿಕವಾಗಿಯೂ ನನ್ನನ್ನು ಚುರುಕುಗೊಳಿಸುವುದು. ನನ್ನ ಮನಸ್ಸು ಶುದ್ಧವಾಗಿರುವಂತೆ ತೋರುತ್ತಿದೆ. ಪ್ರತಿಯೊಂದು ದೀರ್ಘ ಶ್ವಾಸವೂ ನನ್ನ ಹೃದಯದ ಕ್ರಿಯೆಗಳನ್ನು ಪ್ರಚೋದಿಸುವುದು, ಮತ್ತು ನನ್ನ ಶರೀರದ ಪ್ರತಿಯೊಂದು ಕೋಶಕ್ಕೂ ಒಳ್ಳೆಯ ಪೋಷಣೆಯನ್ನು ಒದಗಿಸುವುದು. ದೀರ್ಘ ಉಸಿರಾಟದ ವ್ಯಾಯಾಮವನ್ನು ನಾನು ಆನಂದಿಸುತ್ತೇನೆ ಮತ್ತು ಅದನ್ನು ಆಗಾಗ್ಗೆ ಮಾಡುವುದನ್ನು ನೆನಪಿಟ್ಟುಕೊಳ್ಳುತ್ತೇನೆ".

---

## ಮುನಿಸಿಪಲ್ ಕನ್ನಡ ಶಾಲೆಯ ಮಕ್ಕಳಿಗೆ ಅನುದಾನ

ಕಳೆದ ನಾಲ್ಕು ವರ್ಷದಿಂದ ಮೈಸೂರು ಅಸೋಸಿಯೇಶನ್ ಮಾಟುಂಗಾದ ಶ್ರದ್ಧಾನಂದ ಮಾರ್ಗದಲ್ಲಿರುವ ಮುನಿಸಿಪಲ್ ಕನ್ನಡ ಶಾಲೆಗೆ ಬರುವ ಬಡವಿದ್ಯಾರ್ಥಿಗಳಿಗಾಗಿ ಅನುದಾನವನ್ನು ನೀಡುತ್ತಾ ಬಂದಿದೆ. ಈ ವರ್ಷವೂ ಶಾಲೆಯ ಮುಖ್ಯೋಪಾಧ್ಯಾಪಕರ ಅಪೇಕ್ಷೆಯಂತೆ 500 ನೋಟ್‌ಬುಕ್‌ಗಳನ್ನೇ ಅನುದಾನವಾಗಿ ಕೊಡಲಾಗಿದೆ. ಪ್ರತಿವರ್ಷ Rs. 1500/- ಗಳ ಅನುದಾನವನ್ನು ನೀಡುತ್ತಿದ್ದು ಈ ವರ್ಷ Rs. 2500/- ಕ್ಕೆ ಏರಿದೆ. ಅಸೋಸಿಯೇಶನ್ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅನುದಾನವನ್ನು ನೀಡಲು ಆಶಿಸುತ್ತದೆ. ಮತ್ತು ಇದಕ್ಕಾಗಿ ತನ್ನ ಸದಸ್ಯರ ಸಹಕಾರ್ಯವನ್ನು ಅಪೇಕ್ಷಿಸುತ್ತದೆ. ಈ ಅನುದಾನ ಕಾರ್ಯದಲ್ಲಿ ಸಹಭಾಗಿಗಳಾಗಲು ಇಚ್ಛಿಸುವ ಸದಸ್ಯರು ತಮ್ಮ ಅಭಿಪ್ರಾಯವನ್ನು ಮಧುಸೂದನ್ ಅವರಲ್ಲಿ ತಿಳಿಸಬೇಕಾಗಿ ವಿನಂತಿ.

## ಅಭಿನಂದನೆ



ಸೀಮಾ ದೇವಡಿಗಾ

ವಿದ್ಯಾಪ್ರಸಾರಕ ಮಂಡಳಿಯ ಮುಲುಂಡ್ ಕನ್ನಡ ಶಾಲೆಯ ವಿದ್ಯಾರ್ಥಿನಿಯಾದ ಕುಮಾರಿ ಸೀಮಾ ಗಣೇಶ ದೇವಡಿಗಾ 1998 ಸಾಲಿನ ಎಸ್.ಎಸ್.ಸಿ. ಪರೀಕ್ಷೆಯಲ್ಲಿ 88.93% (667/750) ಅಂಕಗಳನ್ನು ಗಳಿಸಿ ಕನ್ನಡ ಮಾಧ್ಯಮದಿಂದ ಪರೀಕ್ಷೆ ಬರೆದವರಲ್ಲಿ ಮೊದಲಿಗಳಾಗಿ ಉತ್ತೀರ್ಣಳಾಗಿದ್ದಾಳೆ. ಕುಮಾರಿ ಸೀಮಾಳಿಗೆ ನೇಸರುವಿನ ಅಭಿನಂದನೆಗಳು. ಹಾಗೂ ಮುಂದಿನ ತನ್ನ ಜೀವನದ ಎಲ್ಲಾ ಪರೀಕ್ಷೆಗಳಲ್ಲೂ ಇದೇ ರೀತಿ ಉತ್ತಮ ಅಂಕಗಳೊಡನೆ ಉತ್ತೀರ್ಣಳಾಗಿ ಕನ್ನಡಕ್ಕೂ ಕನ್ನಡ ಬಾಂಧವರಿಗೂ ಹೆಮ್ಮೆಯ ಗುರುತಾಗಿ ಬೆಳೆಯಲೆಂದು ಹಾರೈಸುತ್ತದೆ. ಸೀಮಾಳ ತಂದೆಯವರಾದ ಶ್ರೀ ಗಣೇಶ ದೇವಡಿಗಾ ಅವರು ವಡಾಲಾದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು. ಕುಮಾರಿ ಸೀಮಾಳಿಗೆ ಮೈಸೂರು ಅಸೋಸಿಯೇಶನ್ ಹಾಗೂ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕನ್ನಡ ಶಾಲೆಯ ವತಿಯಿಂದ ಬಹುಮಾನ Rs. 1000/- ಘೋಷಿಸಲಾಗಿದೆ.

## Children's Special Issue

As usual, the November Issue of 'Nesaru''will be brought out as children's special issue.

The members are requested to send their children's contributions in the form of drawings, poems, essay, stores, jokes, etc. The contributions should reach 'Nesaru' office before 10th Oct. 1998.

# ಸುತ್ತಮುತ್ತ

### ಕನ್ನಡ ವನಿತಾ ಸಮಾಜದಲ್ಲಿ 50ನೇ ಸ್ವಾತಂತ್ರ್ಯೋತ್ಸವ

ನಮ್ಮ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಅಂಗವಾಗಿ ಸೋಮವಾರ ತಾ. 20-7-1998ರಂದು ಕನ್ನಡ ವನಿತಾ ಸಮಾಜದಲ್ಲಿ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರು ಅಸೋಸಿಯೇಶನ್ನಿನ ಲಲಿತಕಲಾ ವಿಭಾಗದ ಪರವಾಗಿ ಶ್ರೀಮತಿ ಭಾರತಿ ಪ್ರಸಾದ ಅವರ ನೇತೃತ್ವದಲ್ಲಿ ಶ್ರೀಮತಿ ಲಲಿತಾ ಬಾಲು, ಶ್ರೀಮತಿ ರಾಜೇಶ್ವರಿ ಗೋಪಾಲ ಕೃಷ್ಣ, ಶ್ರೀಮತಿ ಲಕ್ಷ್ಮೀ ಸೀತಾರಾಮ್ ಹಾಗೂ ಶ್ರೀಮತಿ ಪುಷ್ಪಾ ರಘುನಾಥ್ ರಾವ್ ಅವರು ರಾಷ್ಟ್ರ ಭಕ್ತಿಗೀತೆಗಳನ್ನು ಹಾಡಿ ನೆರೆದಿದ್ದ ಸಭಿಕರನ್ನು ರಂಜಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಮೀರಾ ಕುಲಕರ್ಣಿಯವರು ಸ್ವಾತಂತ್ರ್ಯದ ಆಂದೋಲನದ ಆ ದಿನಗಳ ತಮ್ಮ ಅನುಭವವನ್ನು ಹಂಚಿಕೊಂಡರು. ಅವರ ಪತಿ ಶ್ರೀ ಧರ್ಮರಾಜ ಕುಲಕರ್ಣಿಯವರು ಸ್ವಾತಂತ್ರ್ಯದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದುದನ್ನು ವಿವರಿಸಿದರು. ಅಂದಿನ ಕಷ್ಟಗಳನ್ನು ನೆನೆಸಿಕೊಂಡು ಇಂದಿನ ಸ್ವಾತಂತ್ರ್ಯದ ಮಹತ್ವದ ಅರಿವು ನಮ್ಮಲ್ಲಿ ಸದಾ ಜಾಗೃತವಾಗಿರತಕ್ಕದ್ದು ಎಂಬುದನ್ನು ಮನಗಾಣಿಸಿಕೊಟ್ಟರು.

### ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ

ಶ್ರೀ ಜಿ. ಡಿ. ಜೋಷಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಗಡಿನಾಡ ಘಟಕದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣಾಧಿಕಾರಿ ಹಾಗೂ ಬೆಂಗಳೂರು ಉತ್ತರ ಉಪವಿಭಾಗದ ಉಪವಿಭಾಗಾಧಿಕಾರಿ ಆಗಿರುವ ಶ್ರೀ ಜೆ. ಎಸ್. ವಿರೂಪಾಕ್ಷಯ್ಯನವರು ಘೋಷಿಸಿದ್ದಾರೆ.

### ಅಬುಧಾಬಿಯಲ್ಲಿ 'ಮರುಭೂಮಿ' ಬಿಡುಗಡೆ

ಮುಂಬಯಿಯ ಮಾನವ್ಯಕವಿಯೆಂದು ಹೆಸರಾದ ಶ್ರೀ ಬಿ.ಎ.ಸನದಿ ಅವರು ಇತ್ತೀಚೆಗೆ ಯು.ಎ.ಇ. ಪ್ರವಾಸದಲ್ಲಿದ್ದಾಗ ಅಬುಧಾಬಿಯ ಕರ್ನಾಟಕ ಸಂಘದವರು ಆತ್ಮೀಯವಾಗಿ ಸನ್ಮಾನ ನೀಡಿದರು. ಸನದಿಯವರ ಹೊಸ ಕವನ ಸಂಕಲನ 'ಮರುಭೂಮಿ'ಯನ್ನೂ ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ಈ ಕೃತಿಯ ಬಿಡುಗಡೆ ಮಾಡಿದ ಸಂಘದ ಪ್ರಧಾನ ಸಂಚಾಲಕ ಶ್ರೀ ಸರ್ವೋತ್ತಮ ಶೆಟ್ಟಿಯವರು ಮಾತನಾಡುತ್ತ ಮರುಭೂಮಿಯೇ ಹೆಚ್ಚಾಗಿರುವ ಈ ನಾಡಿನಲ್ಲಿ ಮುಂಬಯಿಯ ಮೆಚ್ಚಿನ ಕವಿಯ 'ಮರುಭೂಮಿ' ಬಿಡುಗಡೆ ನಡೆಯುತ್ತಿರುವುದು ತುಂಬ ವೈಚಿತ್ರಪೂರ್ಣ ಎಂದು ಹೇಳಿದರು. ಶ್ರೀ ಮನೋಹರ ತೋನ್ಸೆಯವರು ಸನದಿಯವರ ಜೀವನ ಹಾಗೂ ಕಾವ್ಯ ಸಾಧನೆಗಳ ಕುರಿತು ಮಾತನಾಡಿದರು. ಸನದಿಯವರು ಮುಂಬಯಿ ಆಕಾಶವಾಣಿಯ ಮೂಲಕ ಹೊಸಪ್ರತಿಭೆಗಳಿಗೆ ಉತ್ತೇಜನ ನೀಡಿದ ಸಂಗತಿಯನ್ನು ಶ್ರೀಮತಿ ರೇಣಿ ಲೋಬೊ ಅವರು ಸ್ಮರಿಸಿ ಮಾತನಾಡಿದರು. ಕೃತಿ ಬಿಡುಗಡೆಯನಂತರ ಸಂಘದ ಮಾಜಿ ಪ್ರಧಾನ ಸಂಚಾಲಕರೂ ಅಬುದಾಬಿಯ ಹಿರಿಯ ಕನ್ನಡಿಗರೂ ಆದ ಶ್ರೀ ರೇಮಂಡ್ ಡ'ಸೋಜಾ ಅವರು ಶ್ರೀ ಮತ್ತು ಶ್ರೀಮತಿ ಸನದಿಯವರಿಗೆ ಶಾಲು, ಫಲ ಪುಷ್ಪ, ನೆನಪಿನ ಕಾಣಿಕೆಗಳನ್ನಿತ್ತು ಸನ್ಮಾನಿಸಿದರು. ಶ್ರೀ ಅನಂತ ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ಇದೇ ಸಂಚಾರ ಕಾಲದಲ್ಲಿ ದುಬ್ಬಾ, ಕರ್ನಾಟಕ ಸಂಘದವರು ಸಂಭ್ರಮದಿಂದ ಏರ್ಪಡಿಸಿದ ತಮ್ಮ 12ನೆಯ ವಾರ್ಷಿಕೋತ್ಸವದ ಅಂಗವಾಗಿ ಸನದಿಯವರನ್ನು ಸನ್ಮಾನಿಸಿದರು. ದುಬ್ಬಾನಲ್ಲಿ ಭಾರತದ ಕೌನ್ಸಿಲ್ ಜನರಲ್ ಆಗಿರುವ ಶ್ರೀ ಪ್ರಭು ದಯಾಲ್ ಅವರು ಈ ವಾರ್ಷಿಕೋತ್ಸವದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

### ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

1997ರ ಶ್ರೇಷ್ಠ ಕನ್ನಡ ಕೃತಿಗಳಿಗಾಗಿ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ ಯೋಜನೆಗೆ ಕಥಾ ಸಂಕಲವನ್ನು ಆಯ್ಕೆ ಮಾಡಲಾಗಿದ್ದು ಸಂಘವು ಆಯ್ಕೆ ವಿವರಗಳನ್ನು ಈ ಕೆಳಗಿನಂತೆ ಪ್ರಕಟಿಸಿದೆ.

1. ಪ್ರಥಮ 'ಹಕ್ಕಿ ಮತ್ತು ಅವಳು'
   ಮಿತ್ರಾ ವೆಂಕಟ್ರಾಜ, ಮುಂಬಯಿ ರೂ. 5000
2. ದ್ವಿತೀಯ 'ನಾಕನೇ ನೀರು'
   ನಾಗವೇಣಿ ಎಚ್. ಹಂಪಿ ರೂ. 3000
3. ತೃತೀಯ 'ಮೃದ್ಗಂಧ'
   ಸುನಂದಾ ಬೆಳಗಾಂವಕರ, ಬೆಂಗಳೂರು
   ರೂ. 2000

### ಮುಂಬಯಿ ಕನ್ನಡ ಸಂಘದ ವತಿಯಿಂದ ಬಿ.ಎ., ಎಚ್.ಎಸ್.ಸಿ. ಮತ್ತು ಎಸ್. ಎಸ್. ಸಿ. ವಿದ್ಯಾರ್ಥಿಗಳಿಗೆ ನಗದು ಬಹುಮಾನ

ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯ ತೆಗೆದುಕೊಂಡು ಅತೀ ಹೆಚ್ಚು ಮಾರ್ಕುಗಳಿಸಿ ಪಾಸಾದ ವಿದ್ಯಾರ್ಥಿಗೆ ಮುಂಬಯಿ ಕನ್ನಡ ಸಂಘದ ವತಿಯಿಂದ ನಗದು ಬಹುಮಾನ ಕೊಡಲು ನಿರ್ಧರಿಸಲಾಗಿದೆ. ಇವನ್ನು ನಿರ್ಮಲ್ಕ ಚಾರಿಟಿ ಟ್ರಸ್ಟ್ ಎಂಡೋಮೆಂಟ್ ಫಂಡಿನಿಂದ ಕೊಡಲಾಗುವುದು. ಅದೇ ಪ್ರಕಾರ ಮುಂಬಯಿ - ಪುಣೆ ಎಚ್.ಎಸ್.ಸಿ. ಬೋರ್ಡಿನ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗೆ ಮತ್ತು ಎಸ್. ಎಸ್. ಸಿ. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಗೆ ಹಾಜರಾಗಿ ಅತೀ ಹೆಚ್ಚು ಮಾರ್ಕು ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗೆ ನಗದು ಬಹುಮಾನ ಕೊಡಲಾಗುವುದು. ಈ ಎರಡು ಬಹುಮಾನಗಳನ್ನು ಮಧುಗಿರಿ ಮಠ ಶಾಂತವೀರ ಪಾರ್ವತಮ್ಮ ದತ್ತಿನಿಧಿಯಿಂದ ಪ್ರತಿವರ್ಷಕೊಡಲಾಗುತ್ತಿದೆ. 1998ನೇ ವರ್ಷದ ಮಾರ್ಚ್ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಿ.ಎ., ಎಚ್.ಎಸ್.ಸಿ., ಎಸ್.ಎಸ್.ಸಿ. ವಿದ್ಯಾರ್ಥಿಗಳು ತಮ್ಮ ಅಂಕ ಪಟ್ಟಿಯ ನಕಲು ಪ್ರತಿಗಳನ್ನು ಪ್ರಾಂಶುಪಾಲರ ಸಹಿ ಪಡೆದು, ಆಗಸ್ಟ್ 31ರ ಒಳಗೆ ಸಂಘದ ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಬೇಕೆಂದು ಪ್ರಕಟಣೆ ತಿಳಿಸಿದೆ.

ವಿಳಾಸ
ಶ್ರೀ ಗುರುರಾಜ ಎಸ್. ನಾಯಕ್
ಗೌ. ಪ್ರ. ಕಾರ್ಯದರ್ಶಿ
ಮುಂಬಯಿ ಕನ್ನಡ ಸಂಘ (ರಿ)
2ನೇ ವೆಂಕಟೇಶ ನಿವಾಸ,
ಭಾವುದಾಜಿ ರಸ್ತೆ, ಮಾಟುಂಗ (ಮಧ್ಯರೈಲ್ವೆ)
ಮುಂಬಯಿ 400 019ದೂರವಾಣಿ : 409 96 96

### ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ.ಎ. ಪ್ರವೇಶ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕನ್ನಡ ಎಂ.ಎ. ತರಗತಿಗೆ ಸೇರ ಬಯಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಸಾಂತಾಕ್ರೂಜ್ (ಪೂ), ವಿದ್ಯಾನಗರಿ, ಮುಂಬಯಿ-400 098. Phone No. : 6113081 Extn 345, 341 & 469) ಈ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಅಂಚೆ ಮೂಲಕ ಅರ್ಜಿಗಳನ್ನು ತರಿಸಿಕೊಳ್ಳಲು ಬಯಸುವವರು The Head, Dept. of Kannada, Univ. of Mumbai, Ranade Bhavan, Vidyanagari, Mumbai-400 098. ಈ ವಿಳಾಸಕ್ಕೆ 50 ರೂ. ಎಂ.ಒ. ಅಥವಾ ಡಿ.ಡಿ. ಕಳುಹಿಸಬೇಕು. ಅಲ್ಲದೇ ಸ್ವವಿಳಾಸವಿರುವ ಮೂರು ರೂಪಾಯಿ ಮೌಲ್ಯದ ಅಂಚೆ ಚೀಟಿ ಹಚ್ಚಿದ ಲಕೋಟೆಯನ್ನು ಸಹ ತಪ್ಪದೇ ಜೊತೆಗಿರಿಸಬೇಕು.

## ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ : 1998-99

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಕನ್ನಡೇತರರಿಗಾಗಿ ಪ್ರತಿವರ್ಷದಂತೆ ಈ ವರ್ಷವೂ ಕನ್ನಡ ಸರ್ಟಿಫಿಕೇಟ್ ತರಗತಿಗಳನ್ನು ನಡೆಸಲು ಉದ್ದೇಶಿಸಿದೆ. ಕನ್ನಡ ಕಲಿಯ ಬಯಸುವ ಆಸಕ್ತರು ಈ ತರಗತಿಗೆ ಸೇರಿಕೊಳ್ಳಬಹುದು. ಕನಿಷ್ಠ ವಿದ್ಯಾರ್ಹತೆ: ಎಸ್.ಎಸ್.ಸಿ. ಉತ್ತೀರ್ಣರಾಗಿರಬೇಕು.

ಕನ್ನಡ ಸ್ನಾತಕೋತ್ತರ ಡಿಪ್ಲೊಮಾ ಪ್ರಾರಂಭವಾಗಿದ್ದು ಪದವೀಧರರು ಇದಕ್ಕೆ ಸೇರಲು ಅರ್ಹರಾಗಿರುತ್ತಾರೆ. ಆಸಕ್ತರು, ವಿವರಗಳಿಗಾಗಿ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಸಾಂತಾಕ್ರೂಜ್ (ಪೂರ್ವ), ಮುಂಬಯಿ-400 098. ಈ ವಿಳಾಸವನ್ನು ಸಂಪರ್ಕಿಸಲು ಕೋರಲಾಗಿದೆ.

ಆಸಕ್ತರು ಜುಲೈ 31ರೊಳಗೆ ವಿಭಾಗವನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## CONGRATULATIONS



### ARCHANA SITARAM

Miss Archana Sitaram is the daughter of Smt. Lakshmi and Shri H. K. Sitaram. Both the parents are active members of the Association. Shri H. K. Sitaram has been very active in the sports section, and has been a regular member of our Basket Ball Team which won many trophies for the Association. Smt. Lakshmi is very active in Lalit Kala Section and has participated in many of the plays staged by the Association.

Archana in the talented off spring of this couple, who has inherited both her parents interest. She was actively participating in all school sports activities and won many prizes in inter-school sports (throwball), She has also taken part in cultural programmes like singing and dancing. She is learning classical Bharat Natyam under the guidance of Guru Smt. Jayshree Rajagopalan who is a disciple of Dr. Padma Subramanyam. She has given dance shows along with the troupe in Pune, Chennai and other places. She has also been an artist of the Association Drama Troupe.

Archana has achieved the distinction of being a prudent scholar in academic field also. As student of Little Angel`s High School, she scored 77.28% in S.S.C. in 1993. She joined S.I.E.S. College of Commerce & Economics and again scored 78.83% in H.S.C. Now in 1998, she has graduated from S.I.E.S. College of Arts Science & Commerce and has scored 69% in T.Y.C.Com.

Nesaru Congratulates Archana and wishes her a bright future.

## N.K.E.S. HIGH SCHOOL

The National Kannada Education Society's High School announced that this year a total of 108 students appeared for S.S.C. Exams. 69 students appeared from English Medium Classes and 39 students appeared from Kannada Medium classes. The English Medium had a passing percentage of 87% and Kannada Medium had 85% passing percentage. Kum. Vidya R. Devadiga stood first in School with 75% Marks. Master G. Bilal stood first in English Medium with 72% marks.

Last year the school had an over all passing of 76%. This year the results have improved with an overall passing of 86%.

## MATRIMONIALS

Wanted suitably qualified working boy doing business, settled in Bangalore for a girl settled and working in Bangalore aged 27 years 5' 4" B.E. (Industrial Production) in 1992, and P.G. Diploma in Operation Management in 1994, presently working as consultation engineer in NIIT Bangalore, Hoysala Karnataka, Smartha - Brahmin, Kashyapa Gotra, Star : Uttara III, Kanya Rashi. Please contact, S.N. Rao Tel. : 540 7784

•••

Proposal invited for a smart Brahmin girl age 24 years. B.A.C.S.(Inter) appeared 5'4", Jamadagni Gotra, Uttara Nakshatra. Present not employed, good family. Kindly contact Sri L.S. Krishnamoorthy NGEF 4921186/718 or 8123283-p.p.

ಅಗಲಿಕೆ

## ಶ್ರೀ ವಿ. ಎಚ್. ಸೋಮೇಶ್ವರ್

ಇದೇ ಜುಲೈ 15ರಂದು ಶ್ರೀಯುತ ವಿ. ಎಚ್. ಸೋಮೇಶ್ವರ್ ಅವರು ಅಕಸ್ಮಾತ್ ಹೃದಯಾಘಾತದಿಂದ ವಿಧಿವಶರಾದರೆಂದು ತಿಳಿದು ವಿಷಾದವಾಯ್ತು. ಕಳೆದ ಕೆಲವಾರು ತಿಂಗಳಿಂದ ಅವರು ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಶ್ರೀಯುತರು ಕಳೆದ 15ವರ್ಷಗಳಿಂದ ಅದಮ್ಯ ಉತ್ಸಾಹ ಹಾಗೂ ನಿಸ್ಪೃಹತೆಯಿಂದ B.S.K.B. ಹಾಗೂ ಕನ್ನಡ ಕಲಾ ಕೇಂದ್ರದಲ್ಲಿ ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ದಕ್ಷ ಕಾರ್ಯಕ್ಷಮತೆಯಿಂದ ಇತರರಿಗೆ ಮಾರ್ಗದರ್ಶಿಯಾಗಿದ್ದರು. ಕಲಾಕೇಂದ್ರಕ್ಕೊಂದು ಕಟ್ಟಡವಿರಲೇಬೇಕೆಂದು ಹಠಹಿಡಿದು ಶ್ರಮಿಸಿ ನಿಧಿ ಸಂಗ್ರಹಿಸಿ ಸಯಾನ್‌ನಲ್ಲಿ ಒಂದು ನಿವೇಶನ ಖರೀದಿಸಿ ಕಟ್ಟಡ ಕಟ್ಟಿಸುವಲ್ಲಿ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಬಹಳ ವಿನೋದ ಸ್ವಭಾವದ ಶ್ರೀ ಸೋಮೇಶ್ವರ್, ತಮ್ಮೆಲ್ಲಾ ವೈಯಕ್ತಿಕ ನೋವುಗಳನ್ನೂ ಧೈರ್ಯದಿಂದ ಗಟ್ಟಿಯಾಗಿ ಎದುರಿಸಿ, ಇತರರನ್ನೂ ಮಾತ್ರ ಸದಾ ನಗೆಗಡಲಲ್ಲಿ ತೇಲಿಸುತ್ತಿದ್ದಂತಹ ವ್ಯಕ್ತಿ.

ನಾಟಕ, ಯಕ್ಷಗಾನಗಳಲ್ಲಿ ಬಹಳ ಆಸಕ್ತಿಯಿಂದ ಅವರಿಗೆ ಮೈಸೂರು ಅಸೋಸಿಯೇಶನ್ ಬಗ್ಗೆ ಬಹಳ ಅಭಿಮಾನವಿತ್ತು. ಅಸೋಸಿಯೇಶನ್ನಿನ ನಾಟಕಗಳನ್ನು ತಪ್ಪದೇ ನೋಡುತ್ತಿದ್ದ ಅವರು, ನಿರ್ದೇಶಕರನ್ನೂ ನಟ ವರ್ಗದವರನ್ನೂ ಅಭಿನಂದಿಸಲು ಎಂದಿಗೂ ಮರೆಯುತ್ತಿರಲಿಲ್ಲ.

ಶ್ರೀಯುತರು ಬಹಳ ಮೊದಲೇ ಪತ್ನಿ ವಿಯೋಗವನ್ನು ಭರಿಸಿ, ನಾಲ್ಕೂ ಮಕ್ಕಳಿಗೂ ತಾಯಿ ಹಾಗೂ ತಂದೆಯ ಸ್ಥಾನದಲ್ಲಿ ನಿಂತು ಜೋಪಾನ ಮಾಡಿದರು. ಇಂದು ನಾಲ್ಕೂ ಮಕ್ಕಳೂ ಸಮಾಜದಲ್ಲಿ ಅತ್ಯಂತ ಜವಾಬ್ದಾರಿಯುತ ಗಣ್ಯಸ್ಥಾನದಲ್ಲಿದ್ದು ತಮ್ಮ ತಂದೆಯವರ ಶ್ರಮವನ್ನು ಸಾರ್ಥಕ ಗೊಳಿಸಿರುತ್ತಾರೆ. ಅವರ ಪುತ್ರರಾದ ಶ್ರೀ ಅಮೃತ್ ಸೋಮೇಶ್ವರ್ ಅವರು ಮೈಸೂರು ಅಸೋಸಿಯೇಶನ್ನಿನ ಸದಸ್ಯರಾಗಿರುತ್ತಾರೆ.

'ನೇಸರು' ಅಗಲಿದ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬದ ಸದಸ್ಯರಿಗೆ ಹಾಗೂ ಸ್ನೇಹಿತರಿಗೆ ದುಃಖವನ್ನು ಭರಿಸಲು ಆತ್ಮಶಕ್ತಿಯನ್ನೂ ಹಾರೈಸುತ್ತದೆ.

Regn. No. 040015/86
Regn. No. MH/by/NE121/98
Date of Posting : 9/10-8-98

## ಮಹಿಳಾ ಮಂಡಳಿಯ ಪಿಕ್‌ನಿಕ್

(ಪುಟ 11ರಿಂದ)

ಎತ್ತರದ ದೋಣಿಯಲ್ಲಿ ಕೋಟೆ ತಲುಪಿದ್ದಾಯಿತು. ಹಳ್ಳಿಯ ಉತ್ತರದಲ್ಲಿರುವ ಸಾವಿತ್ರಿ ನದಿಯ ಪ್ರಚಂಡ ಖಾಡಿಯ ಮಧ್ಯದಲ್ಲಿ ಆಮೆಯ ತರಹ ಜಂಜೀರಾ ಕೋಟೆ ಕಟ್ಟಲ್ಪಟ್ಟಿದೆ. ಎಡಗಡೆಗೆ 'ಶಿಲಾಹಾರರ ರಾಜಧಾನಿಯಾಗಿದ್ದ ರಾಜಪುರ್ ಎನ್ನುವ ಊರಿದೆ. ಗುಡ್ಡದ ಮೇಲೆ ಬೌದ್ಧರ ವಿಹಾರವೂ ಇದೆ.

ದ್ವಾರದ ಒಳಗಿನ ದಿಡ್ಡೀ ಬಾಗಿಲು ದಾಟಿದರೆ, ರಾಮ್ ಪಂಚಾಯತನ್, ನಂತರದ ಪೀರ್ ಪಂಚಾಯತನ್ ಮತ್ತು ಸಿದ್ದಿ ಮನೆತನದ ಸಮಾಧಿಗಳಿವೆ. ಅಂಗಳದಲ್ಲಿ ರಾಮ್ ಕ್ಕೋಳಿಯನ್ನು ಹಿಡಿಯಲು ಬಂದ ಪೀರಖಾನ್ ಜಹಾಜಿನ ವಿಜಯ ಪತಾಕೆಯಾಗಿ ಮೂರು ಲಂಗರುಗಳೂ ಇವೆ.

ಕೋಟೆಯ ಒಳಗೆ ಮಹರ್, ಕ್ಕೋಳಿ, ಚಮ್ಮಾರ, ಮುಸ್ಲಿಮರ ಪೇಟೆಗಳಿದ್ದ ಕುರುಹುಗಳಿವೆ. ಕೋಟೆಯ ಮಧ್ಯದಲ್ಲಿ ದೊಡ್ಡ ಆಯುಧಾಗಾರ, ಖಜಾನೆ ಮತ್ತು ಎರಡು ಕೊಳಗಳಿವೆ. ದಕ್ಷಿಣದಲ್ಲಿರುವ, ಹಿಂದೂ ಶಿಲ್ಪದ ಅವಶೇಷದಂತಿರುವ ದುಂಡಗಿನ ಶಿಲೆಯ ಮೇಲೆ ಮುರುಡ್ ಸಿಂಹಾಸನಲ್ಲಿ ಕೂಡುವ ಮೊದಲು ಕೂರುತಿದ್ದರು ಎಂಬ ಪ್ರತೀತಿ ಇದೆ. ಕೋಟೆಯ ಶಿಲೆಗಳು ಮಜಬೂತಾಗಿದ್ದು ಪ್ರತಿ 100 ಅಡಿ ಅಂತರಗಳಲ್ಲಿ 19 ಬುರುಜುಗಳಿವೆ. ಪ್ರತಿಯೊಂದು ಬುರುಜಿನ ಕಮಾನಿನಿಂದ ಹೊರ ಮುಖವಾಗಿ ತೋಪುಗಳನ್ನು ಜೋಡಿಸಲಾಗಿದೆ.

ಧ್ವಜ ಸ್ತಂಬದ ಹತ್ತಿರ `ಕಲಾಲ್ ಭಾಂಗಡಿ' ಎನ್ನುವ ಮುಖ್ಯ ತೋಪಿದೆ. ಎದುರಿಗೆ `ಲಾಂಡ್ ಕಸಮ್' ಎನ್ನುವ ಇನ್ನೊಂದು ತೋಪಿದೆ. ಸತತ ಲೂಟಿಗಾರರ ಹಾವಳಿಯಿಂದ ರಕ್ಷಿಸಲು ಸರಕಾರದ ಪರವಾನಗಿ ಪಡೆದು ರಕ್ಷಣಾ ಗೋಡೆ ಕಟ್ಟಿದ್ದಾರೆ. ರಾಮ್ ಪಾಟೀಲ್ ಹಾಗೂ ಏಕ್‌ಬಾರ್ ರಾವ್ ಈ ಕೋಟೆಯ ನಿರಂಕುಶ ಪ್ರಭುಗಳಾಗಿ ಆಳಿದ್ದಾರೆ.

ನಿಜಾಮ್ ಶಾಹಿಯ ಸೈನಾಪತಿ ಪೀರಂಖಾನ್ ಆ ಅಭೇದ್ಯ ಕೋಟೆಯನ್ನು ಭೇದಿಸಲು ಹೀಗೆ ಉಪಾಯ ಮಾಡಿದನಂತೆ. ರಾಜಪುರಿಯ ಖಾಡಿಯಲ್ಲಿ ನಿಂತು ಏಕ್‌ಬಾರ್ ರಾವ್ ಹತ್ತಿರ ತಾವು ವ್ಯಾಪಾರಿಗಳೆಂದು ಹೇಳಿ ಒಂದು ರಾತ್ರಿಯ ಆಶ್ರಯ ಕೇಳಿದನು. ರಾತ್ರಿ ಕ್ಕೋಳಿಗಳಿಗೆ ಸೆರೆ ಕುಡಿಸಿ ಕೋಟೆ ವಶ ಮಾಡಿಕೊಂಡನೆಂದು ಹೇಳುತ್ತಾರೆ.

ನಂತರ ಬಂದ ಬುರ್ರ್ಹಾಣನೆಂಬುವನ್ನು ಕೋಟೆಯನ್ನು ಕ್ರಿ.ಪೂ. 1567ರಲ್ಲಿ ಭದ್ರ ಪಡಿಸಿದ. 1571ಕ್ಕೆ ಪೂರ್ತಿ ಆಯಿತು. ಅರ್ಧ ಮೈಲಿ ಪರಿಧಿಯುಳ್ಳ $1^{1}/_{2}$ ಮೈಲಿ ಉದ್ದದ ಕೋಟೆಗೆ `ಕೋಟೆ ಮಹ ರೂಬ್' ಎಂದು ಹೆಸರಿಟ್ಟರು.

ಹಿಂದವಿಸ್ವರಾಜ್ಯ ಕಟ್ಟಿದ ಶಿವಾಜಿ ಕೋಟೆಗೆಲ್ಲಲು 3 ಸಲ ಪ್ರಯತ್ನ ಪಟ್ಟರೂ ಗೆಲ್ಲಲು ಸಾಧ್ಯವಾಗಲಿಲ್ಲ. ಅವನ ಮಗ ಸಂಭಾಜಿ 1682ರಲ್ಲಿ ಸತತವಾಗಿ ಒಂದು ತಿಂಗಳು ಪೂರ್ತಿ ಎಲ್ಲ ಕಡೆಯಿಂದಲೂ ಗುಂಡಿನ ಮಳೆ ಸುರಿಸಿದರೂ ಕೋಟೆ ಅಭೇದ್ಯವಾಗಿಯೇ ಉಳಿಯಿತು.

ರಾಜಪುರಿಯಿಂದ ಕಲ್ಲು ಸೇತುವೆ ಹಾಕುವ ಪ್ರಯತ್ನವೂ ವ್ಯರ್ಥವಾಯಿತು. ಪೇಶ್ವೆಗಳಿಗೂ ದುರ್ಗಮವಾದ ಈ ಕೋಟೆ ಸ್ವತಂತ್ರ ಭಾರತದಲ್ಲಿ ಇತರ ಸಂಸ್ಥೆಗಳೊಂದಿಗೆ ವಿಲೀನಗೊಂಡಿದೆ ಎಂದು Guide ಕೋಟೆಯ ಇತಿಹಾಸ ಮುಗಿಸುವ ಹೊತ್ತಿಗೆ ಮುಖ್ಯದ್ವಾರದ ಬಳಿಗೆ ಬಂದಿದ್ದೆವು.

ಅವನು, ಅವಸರ ಅವಸರವಾಗಿ ತನ್ನ ದುಡ್ಡು ಪಡೆದು, ಹೊರಬಿದ್ದ ದೋಣಿಯಲ್ಲಿ ಹತ್ತಿ ಹೊರಟುಬಿಟ್ಟ. ನಾವಿನ್ನೂ ಇತಿಹಾಸದ ಗುಂಗಿನಿಂದ ವರ್ತಮಾನದೆಡೆಗೆ ಬರುತ್ತಿದ್ದಂತೆ ಕತ್ತಲಾಗುತ್ತಿರುವ ವಾತಾವರಣ ನಮ್ಮನ್ನು ಮೂಕವಾಗಿಸಿತ್ತು. ಎಷ್ಟು ದೋಣಿಗಳು ಬಂದು ಅವರ ಪರ passengerನ ಹತ್ತಿಸಿಕೊಂಡು ಹೋದರೂ ನಮ್ಮ ದೋಣಿ ಬರಲಿಲ್ಲ. ದೋಣಿಯವನು ಮರೆತನೇ ಎನ್ನುವ ಭಯ ನಮ್ಮನ್ನಾವರಿಸಲು ಶುರುವಾಯ್ತು. ರಾತ್ರಿ 7 ಗಂಟೆಯ ನಂತರ ಅಲ್ಲಿ ಯಾರೂ ಇರುವುದಿಲ್ಲ. ಎಲ್ಲರನ್ನೂ ಊರು ತಲುಪಿಸುತ್ತಾರೆ ಎನ್ನುವ ಭರವಸೆ ಇದ್ದರೂ ದೋಣಿ ಕಾಣುವ ತನಕ ಮಾತಿಲ್ಲದೆ ಕೂತಿದ್ದಾಯ್ತು. ಅಂತೂ ಕೊನೆಗೆ ನಾವು ದೋಣಿ ಹತ್ತಿ ದಡ ತಲುಪಿದೆವು. ಪ್ರತಿಯೊಂದು ಸಲ ಇಳಿದಾಗಲೂ ಬಾಯಾಡಿಸುತ್ತಿದ್ದ ಅಥವಾ cold drinks ಕುಡಿಯುತ್ತಿದ್ದವರು ಮಳೆಯ ಪರಿವೆಯಿಲ್ಲದೆ ನಿಂತರು. ಮತ್ತೆ ಅವರನ್ನು ಹೊರಡಿಸಿ, ಬಸ್‌ನೊಳಗೆ ಕೂಡಿಸಲು ಶತಪ್ರಯತ್ನ ಮಾಡಬೇಕಾಯ್ತು. ಸಂಜೆ Bhel ಪುರಿಯ ಕಾರ್ಯಕ್ರಮವಿದ್ದುದರಿಂದ ಎಲ್ಲರಿಗೂ ಹೊಟ್ಟೆ ತುಂಬ ಹಂಚಿದ್ದಾಯ್ತು.

ಬೆಳಗಿನಿಂದ ಆಯಾಸವಾಗಿ, Bhel ಹೊಟ್ಟೆ ತಲುಪುತ್ತಲೇ ಧಂಡಿಯಾಗಿ ನೀರು ಕುಡಿದು ಡೊಂಬಿವಿಲಿ ತಲುಪುವ ತನಕ ಎಲ್ಲರೂ ಒಂದು ನಿದ್ದೆ ಮಾಡಿ ಎದ್ದರು.

ನಿಸರ್ಗ ಸೌಂದರ್ಯದ ಜೊತೆಗೆ ಇತಿಹಾಸದ ಪರಿಚಯವೂ ಆಗಿದ್ರಿಂದ ಮಹಿಳಾ ಸಂಘದ ಇಂಥ ಕಾರ್ಯಕ್ರಮಗಳಿಗೆ ಮನದಲ್ಲೇ ವಂದಿಸುತ್ತಾ ಮನೆ ಸೇರಿದೆವು.

## AN APPEAL

National Association of Disabled's Enterprises, situated at Vikhroli, Mumbai provides various welfare services to Handicapped persons like Blind, Deaf, Orthopedically Handicapped & Mentally Handica pped persons, irrespective of any caste, creed or religion.

The said Association has started a fund collection drive to raise funds for setting up a "Management-cum-Technical Training Centre" as well as a "Charitable Company" with Workshop Units for the Handicapped to be located in every District/Taluka place in the Maharashtra State to provide training / employment / self-employment and such other welfare services to unemployed handicapped persons on large scale.

The noble aim of said Association to create self employment and other welfare opportunities for the handicapped, particularly when millions of our handicapped population are facing serious unemployment problem, deserves to be appreciated and generously and whole heartedly.

I, therefore, appeal to all Citizens, Managements of educational Institutions, teachers, Students, Social Organisations, and Business Establishments, etc. to donate generously in cash as well as kind to the National Association of Disabled's Enterprises to enable them to implement their various welfare projects for the Handicapped as stated above. I also appeal to them to kindly entrust their contracts / orders for various jobs / items required by them to the companies / Workshop Units / Cooperatives being set up for the Handicapped by the said association and thus support them to create more employment opportunities for the disabled.

I am sure, you would respond favourably to my above appeal and extend your generous supporting hands towards the rehabilitation of poor and unemployed handicapped person, through the said Association.

**M.A.N. Prasad**
Hon. Secretary
The Mysore Association

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38